ಮಾರ್ಚ್ 2024

# ಸೇವಾ ವಾಣಿ

ಸೇವಾ ಸಂಗಮ

ಆರ್ಬಿಟ್








ಪೂಜ್ಯ ರಾಬರ್ಟ್ ಮಿರಾಂದಾ
ಗುಲ್ಬರ್ಗ ಧರ್ಮಾಧ್ಯಕ್ಷರು

ಫಾ. ವಿಕ್ಟರ್ ವಾಸ್
ನಿರ್ದೇಶಕರು

## ಕ್ಯಾನ್ಸರ್ ವಿರುದ್ಧ ಆಂದೋಲನ

ಫೆಬ್ರವರಿ 06 2024 ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರ ಸಂಯೂಕ್ತಾಶ್ರಯದಲ್ಲಿ ಭಾಲ್ಕಿ ಪಟ್ಟಣದಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆ ಮಾಡಲಾಯಿತು. ಕೆ.ಇ.ಬಿ ಕಛೇರಿಯಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆ ಜಾಗೃತಿ ಜಾಥಾಕ್ಕೆ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ್ ವಾಸ್ ರವರು ಜಾಗ್ರತಿ ಜಾಥಾಕ್ಕೆ ಚಾಲನೆ ನೀಡಿದರು. ಕೆ.ಇ.ಬಿ ಕಛೇರಿಯಿಂದ ಬಸವೇಶ್ವರ ವೃತ, ತಹಸಿಲ್ ಕಾರ್ಯಲಾಯದ ವರೆಗೆ ನಲಂದಾ ಪ್ರೌಢ ಶಾಲೆ ಮತ್ತು ಡಿಸೇಂಟ್ ಪ್ರೌಢ ಶಾಲೆಯ ಮಕ್ಕಳೊಂದಿಗೆ ಕ್ಯಾನ್ಸರ್ ವಿರುದ್ದ ಘೋಷಣೆಗಳು ಹೇಳುತ್ತ ಮತ್ತು ಕರಪತ್ರಗಳನ್ನು ನೀಡುತ್ತ ಜಾಥಾ ಮಾಡಲಾಯಿತು. ಡಾಕ್ಟರ್ ಶ್ರೀಮತಿ ಶಿವಲಿಲಾ ತಾಲೂಕ ಆರೋಗ್ಯ ಕೇಂದ್ರ  ಅವರು ಕ್ಯಾನ್ಸರ್ ತಡೆಗಟ್ಟುವಿಕೆ, ಆರಂಭಿಕ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸಾ ವಿಧಾನಗಳ ಕುರಿತು ಮಾತನಾಡಿದರು. ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕಾದರೆ ಶುದ್ದ ಪದಾರ್ಥಗಳು ಸೇವಿಸಬೇಕು. ಧೂಮ್ರಪಾನ, ಆಲ್ಕೋಹಾಲ್, ತಂಬಾಕೂ ಸೇವನೆಯಿಂದ ದೂರವಿರಬೇಕು ಎಂದು ಹೇಳಿದರು. ಫಾ. ಕ್ಲ್ಯಾರಿ ಅವರು ಮಾತನಾಡಿ, ಅತಿಯಾದ ಪ್ಲಾಸ್ಟಕ್ ಬಳಕೆಯಿಂದ ಕ್ಯಾನ್ಸರ್ ರೋಗಕ್ಕೆ ಗುರಿಯಾಗುತ್ತದೆ. ಆದರಿಂದ ಮಕ್ಕಳು, ಹಿರಿಯರು, ಮಹಿಳೆಯರು ಪ್ಲಾಸ್ಟಕ್ ಬಳಕೆ ಕಡಿಮೆ ಮಾಡಬೇಕು. ಶುದ್ದವಾದ ನೀರು ಗಾಳಿ ಸೇವಿಸಬೇಕು. ಹಸಿ ಬೇಳೆ ಕಾಳುಗಳು, ಮನೆಯ ಗೊಬ್ಬರವನ್ನು ಉಪಯೋಗಿಸಿ ತರಕಾರಿಗಳು ಬೇಳಸಿ ಸೇವಿಸಬೇಕು ಎಂದು ಹೇಳಿದರು. ಈ ಜಾಥಾ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾ. ವಿಜಯಕುಮಾರ್. ಉಪ ತಹಶೀಲ್ದಾರರಾದ ಶ್ರೀಮತಿ ಪಲ್ಲವಿ ಮತ್ತು ಸಿಬ್ಬಂದಿಗಳು, ಸ್ಥಳಿಯ ಸಂಯೋಜಕಾರ ಸಿಸ್ಟರ್ ಜೀವಲತಾ, ಸಂಯೋಜಕಾರ ಯೋಹಾನ, ಆರ್ಬಿಟ್ ಸಂಸ್ಥೆಯ ಸಿಬ್ಬಂದಿಗಳು, ನಲಂದಾ ಮತ್ತು ಡಿಸೇಂಟ್ ಪ್ರೌಢ ಶಾಲೆಯ ಮಕ್ಕಳು ಶೀಕ್ಷಕರು ಹಾಗೂ ಭಾಲ್ಕಿ ಪಟ್ಟಣದ ನಾಗರಿಕರು ವಿಶ್ವ ಕ್ಯಾನ್ಸರ್ ದಿನಾಚರಣೆ ಜಾಗೃತಿ ಜಾಥಾದ ಉಪಯೋಗವನ್ನು ಪಡೆದುಕೊಂಡು  ಕ್ಯಾನ್ಸರ್ ರೋಗಿಗಳಿಗೆ ದೇಣಿಗೆಯನ್ನು ನೀಡಿದರು.





Organization of Bidar Integral Transformation, ORBIT, NH 65, Near Railway Sation, Humnabad 585330
Web: www.orbitbidar.org E.mail: orbitbidar93@gmail.com Facebook:orbitbidar

# ನವಜೀವನ (ಎ.ಪಿ.ಎಫ್) ಕಾರ್ಯಕ್ರಮ

## "ಮಾನಸಿಕ ಅಸ್ವಸ್ಥತೆ ಕುರಿತು ತರಬೇತಿ"



ಫೆಬ್ರುವರಿ 15 2024 ರಂದು ಹುಮ್ನಾಬಾದ್ ತಾಲೂಕಿನ ಕನಕಟ್ಟ್ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಒಟ್ಟು 152 ಜನ ಮಕ್ಕಳಿಗೆ ಮಾನಸಿಕ ಅಸ್ವಸ್ಥತೆ ಕುರಿತು ಅರಿವನ್ನು ನೀಡಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯ್ ಕುಮಾರ್ ಭಾಗವಹಿಸಿದ್ದರು. ಈ ತರಬೇತಿಯಲ್ಲಿ ಮಾನಸಿಕ ಕಾಯಿಲೆ ಮೆದುಳಿನ ಕಾಯಿಲೆಯಾಗಿದೆ, ಅಸ್ವಸ್ಥತೆಗೆ ಕಾರಣ ಮತ್ತು ಕಾಯಿಲೆಯ ಲಕ್ಷಣಗಳ ಕುರಿತು ತಿಳಿಸಿದರು, ಗ್ರಾಮದಲ್ಲಿ ಯಾರಾದರೂ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದರೆ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿರಿ, ಆಸ್ಪತ್ರೆಯಲ್ಲಿ ಅವರಿಗೆ ಉಚಿತ ತಪಾಸಣೆ ಮಾಡುತ್ತಾರೆ, ಔಷಧಿ ಕೊಡುತ್ತಾರೆ ಎಂದು ತಿಳಿಸಿದರು. ಮನೋ ವೈದ್ಯರು ಪ್ರತಿ ಬುಧವಾರ ಹುಮನಾಬಾದ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಿಗ್ಗೆ 10 ಗಂಟೆಯಿಂದ 1 ಗಂಟೆವರೆಗೆ ಉಚಿತವಾಗಿ ತಪಾಸಣೆ ಮಾಡಿ ಒಂದು ತಿಂಗಳ ಔಷಧಿಯನ್ನು ಕೊಡುತ್ತಾರೆ ಎಂಬ ಮಾಹಿತಿ ನೀಡಿದರು.



## "ಶಿಕ್ಷಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಎರಡು ದಿವಸದ ಆಪ್ತ ಸಮಾಲೋಚನಾ ತರಬೇತಿ"

ಫೆಬ್ರವರಿ 12. 2024 ರಂದು ಹುಮ್ನಾಬಾದ್ ನಗರದ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಶಿಕ್ಷಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಎರಡು ದಿವಸದ ಆಪ್ತ ಸಮಾಲೋಚನಾ ತರಬೇತಿ ನಡೆಸಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಫಾದರ್ ಜಾಯ್ಸನ್ ವಾಸ್ ಭಾಗವಹಿಸಿ ಆಪ್ತ ಸಮಾಲೋಚನೆಯ ಮೂಲತತ್ವಗಳ ಕುರಿತು ವಿವರಿಸಿದರು. ಸಮುದಾಯದಲ್ಲಿ ಮಾನಸಿಕ ಒತ್ತಡಕ್ಕೆ ಒಳಗಾಗಿ ಕಾಯಿಲೆಯಿಂದ ಬಳಲುತ್ತಿರುವವರನ್ನು ಗುರುತಿಸಿ, ಕಾಯಿಲೆಯ ಪ್ರಾರಂಭದಲ್ಲೆ ಆಪ್ತ ಸಮಾಲೋಚನೆ ಮಾಡಿ, ಆರಂಭಿಕ ಹಂತದಲ್ಲಿ ಒತ್ತಡದಿಂದ ಹೊರಬರುವಂತೆ ಮಾಡಬಹುದು ಎಂದು ವಿವರಿಸಿದ್ದರು. ಈ ಕಾರ್ಯಕ್ರಮದಲ್ಲಿ 22 ಶಿಕ್ಷಕರು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಹಾಗೂ ವಿಚಾರಗಳನ್ನು ಹಂಚಿಕೊಳ್ಳುವುದರ ಮೂಲಕ ಮಾಹಿತಿ ಪಡೆದುಕೊಂಡರು. ಆರ್ಬಿಟ್ ಸಂಸ್ಥೆ ಹಾಗೂ ಸೇವಾ ಸಂಘ ಸಂಸ್ಥೆಯ ಒಟ್ಟು 55 ಸಿಬ್ಬಂದಿ ವರ್ಗದವರು ಭಾಗವಹಿಸಿ ಆಪ್ತ ಸಮಾಲೋಚನೆ ಮೂಲ ತತ್ವಗಳ ಕುರಿತು ಮಾಹಿತಿ ಪಡೆದುಕೊಂಡರು.



## "ಪಾಲಕ / ಪೋಷಕರ ಸಭೆ"



ಫೆಬ್ರವರಿ 9. 2024 ರಂದು ಹುಮನಾಬಾದ ತಾಲೂಕಿನ ನಂದಗಾಂವ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜಿಮ್ ಪ್ರೇಮ್‌ಜೀ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಪಾಲಕ ಪೋಷಕರ ಗುಂಪು ರಚನೆ ಮಾಡಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪ್ರೀತಿ ಸಭೆಯಲ್ಲಿ ಭಾಗವಹಿಸಿ ಮಾನಸಿಕ ಅಸ್ವಸ್ಥರಿಗೆ ಸರಕಾರದಿಂದ ಸಿಗುವಂತಹ ಸೌಲಭ್ಯಗಳ ಕುರಿತು ಚರ್ಚಿಸಿ, ಅವುಗಳು ಹೇಗೆ ಪಡೆದುಕೋಳ್ಳಬಹುದು ಎಂದು ಪಾಲಕರಿಗೆ ಮಾಹಿತಿ ನೀಡಿದರು. ಈ ಸಭೆಯಲ್ಲಿ ಒಟ್ಟು 5 ಜನ ಪಾಲಕ/ ಪೋಷಕರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## "ಮಾನಸಿಕ ರೋಗದ ಕುರಿತು ಜಾಗೃತಿ ಕಾರ್ಯಕ್ರಮ"

ಫೆಬ್ರುವರಿ 22. 2024 ರಂದು ಹುಮ್ನಾಬಾದ್ ತಾಲೂಕಿನ ಶ್ರಾವಣ ಗಲ್ಲಿಯ ಸ್ಥಳೀಯ ಜನರಿಗೆ ಆರ್ಬಿಟ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಮಾನಸಿಕ ರೋಗದ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಲೋಕೇಶ್ ಮಾತನಾಡುತ್ತಾ ಆರೋಗ್ಯ ಎಂದರೇನು ಎಂಬುದರ ಕುರಿತು ಜನರಿಗೆ ಹಾಗು ಶಾಲಾ ಮಕ್ಕಳಿಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 16 ಸ್ಥಳೀಯರು ಹಾಗೂ ಶಾಲಾ ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



## "ಸರ್ಕಾರಿ ಆಸ್ಪತ್ರೆಯಲ್ಲಿ ಡಿ ಎಮ್ ಎಚ್ ಪಿ ಕ್ಯಾಂಪ್ ಮತ್ತು ಮಾನಸಿಕ ಅಸ್ವಸ್ಥರಿಗೆ ಉಚಿತ ಮಾತ್ರೆಗಳು ವಿತರಣೆ"



ಫೆಬ್ರುವರಿ 2. 2024 ರಂದು ಚಿಟುಗುಪ್ಪ ತಾಲೂಕಿನ ಮನ್ನಾಏಖೇಳಿ ಗ್ರಾಮದ ಮಾನಸಿಕ ಅಸ್ವಸ್ಥರಿಗೆ ಮಾನಸಿಕ ಅಸ್ವಸ್ಥರ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಡಿ ಎಮ್ ಎಚ್ ಪಿ ಕ್ಯಾಂಪಿನ ಮನೋವೈದ್ಯರಾದ ಡಾ. ಅಮೂಲ್ ಶರೀಫ್ ಮತ್ತು ಆರ್ಬಿಟ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರು ಭಾಗವಹಿಸಿ, ಬಂದಂತ ಮಾನಸಿಕ ಅಸ್ವಸ್ಥರಿಗೆ ಉಚಿತ ಚಿಕಿತ್ಸೆ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿ, ಉಚಿತ ಮಾತ್ರೆಗಳು ಸಿಗುವ ಹಾಗೆ ಮಾಡಿದರು. ಈ ಶಿಬಿರದಲ್ಲಿ ಒಟ್ಟು 76 ಜನರು ಭಾಗವಹಿಸಿದರು. ಇದರಲ್ಲಿ ಆರ್ಬಿಟ ಸಂಸ್ಥೆಯಿಂದ ಗುರುತಿಸಿದ 30 ಮಾನಸಿಕ ಅಸ್ವಸ್ಥರು ಉಚಿತ ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆ ಪಡೆದುಕೊಂಡಿರುತ್ತಾರೆ.



ಫೆಬ್ರುವರಿ 2. 2024 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ ಬಿ ಗ್ರಾಮದ ಸರ್ಕಾರಿ ಆಸ್ಪತ್ರೆಯಲ್ಲಿ ಮಾನಸಿಕ ಅಸ್ವಸ್ಥರಿಗಾಗಿ ಡಿ ಎಮ್ ಎಚ್ ಪಿ ಶಿಬಿರ ನಡೆಸಲಾಯಿತು. ಈ ಶಿಬಿರದಲ್ಲಿ ಮನೋವೈದ್ಯರಾದ ಡಾ. ಅಮೂಲ್ ಶರೀಫ್ ಮತ್ತು ಆರ್ಬಿಟ್ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರು ಭಾಗವಹಿಸಿ, ಬಂದಂತ ಮಾನಸಿಕ ಅಸ್ವಸ್ಥರಿಗೆ ಉಚಿತ ಚಿಕಿತ್ಸೆ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಉಚಿತ ಮಾತ್ರೆಗಳು ಹಾಗು ಚಿಕಿತ್ಸೆ ಸಿಗುವ ಹಾಗೆ ನೋಡಿಕೊಳ್ಳಲಾಯಿತು, ಈ ಶಿಬಿರದಲ್ಲಿ ಒಟ್ಟು 44 ಜನರು ಭಾಗವಹಿಸಿದ್ದರು. ಇದರಲ್ಲಿ ಆರ್ಬಿಟ್ ಸಂಸ್ಥೆಯಿಂದ ಗುರುತಿಸಿದ 40 ಮಾನಸಿಕ ಅಸ್ವಸ್ಥರು ಉಚಿತ ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆ ಪಡೆದುಕೊಂಡರು.



ಫೆಬ್ರುವರಿ 2. 2024 ರಂದು ಚಿಟ್ಗುಪ್ಪಾ ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಡಿ ಎಮ್ ಎಚ್ ಪಿ ಶಿಬಿರ ನಡೆಯಿತು. ಶಿಬಿರದಲ್ಲಿ 26 ಜನ ಮಾನಸಿಕ ಅಸ್ವಸ್ಥರು, ಖಿನ್ನತೆಗೆ ಒಳಗಾದವರು ಭಾಗವಹಿಸಿ ಮಾನಸಿಕ ತಜ್ಞರಾದ ಡಾಕ್ಟರ್ ರಿತೇಶ್ ಅವರಿಂದ ತಪಾಸಣೆಗೆ ಒಳಗಾಗಿ ಆಪ್ತ ಸಮಾಲೋಚನೆ ಪಡೆದುಕೊಂಡರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಮಾನಸಿಕ ಅಸ್ವಸ್ಥರಿಗೆ ಸೂಕ್ತ ಚಿಕಿತ್ಸೆ ನೀಡುವಲ್ಲಿ ಸಹಾಯ ಮಾಡುವುದರೊಂದಿಗೆ ಉಚಿತವಾಗಿ ಮಾತ್ರೆಗಳು ಸಿಗುವ ಹಾಗೆ ನೋಡಿಕೊಂಡರು.

## "ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಸಯುಕ್ತಾಶ್ರಯದಲ್ಲಿ ಉಚಿತ ಕ್ಯಾನ್ಸರ್ ತಪಾಸಣೆ ಶಿಬಿರ"



ಫೆಬ್ರುವರಿ 23. 2024 ರಂದು ಹುಮನಾಬಾದ ತಾಲೂಕಿನ ಕುಮಾರ್ ಚಿಂಚೋಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಸಯುಕ್ತಾಶ್ರಯದಲ್ಲಿ ಉಚಿತ ಕ್ಯಾನ್ಸರ್ ಶಿಬಿರ ಹಮ್ಮಿಕೊಳ್ಳಲಾಯಿತು. ಈ ಶಿಬಿರದಲ್ಲಿ ಒಟ್ಟು 47 ಮಹಿಳೆಯರು ಮತ್ತು 50 ಗಂಡಸರು ಭಾಗಿಯಾಗಿ ಕಣ್ಣಿನ ತಪಾಷಣೆ, ಬಿಪಿ ತಪಾಸಣೆ ಮತ್ತು ಕ್ಯಾನ್ಸರ್ ತಪಾಸಣೆಯ ಸದುಪಯೋಗವನ್ನು ಪಡೆದುಕೊಂಡರು. ಈ ಶಿಬಿರದಲ್ಲಿ ಆರ್ಬಿಟ್ ಸಂಸ್ಥೆಯ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ, ಜಲಸಿಂಗಿ ಕೇಂದ್ರದ ಬ್ರದರ್ ಫ್ರಾನ್ಸಿಸ್ ಹಾಗೂ ಗ್ರಾಮದ ಆಶಾ ಕಾರ್ಯಕರ್ತೆಯರು, ಗ್ರಾಮ ಪಂಚಾಯತಿಯ ಸದಸ್ಯರು ಮತ್ತು ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು, ಶಾಲೆ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

# ಮಹಿಳಾಭಿವೃದ್ಧಿ ಕಾರ್ಯಕ್ರಮ

## "ತಾಲೂಕಿನ ಒಕ್ಕೂಟದ ಸಭೆ"



ಫೆಬ್ರುವರಿ 22 2024 ರಂದು ಭಾಲ್ಕಿ ತಾಲೂಕಿನ ಒಕ್ಕೂಟದ ಸಭೆಯನ್ನು ಸಿಸ್ಟರ್ ಜೀವಲತಾ ಸ್ಥಳೀಯ ಸಂಯೋಜಕರ ನೇತೃತ್ವದಲ್ಲಿ ನಡೆಸಲಾಯಿತು. ಮಹಾಸಂಘದ ಪದಾಧಿಕಾರಿಗಳಿಗೆ ಅವರ ಕಾರ್ಯಕ್ಷೇತ್ರದಲ್ಲಿ ಆದಂತಹ ಕೆಲಸ ಕಾರ್ಯಗಳ ಕುರಿತು ತಿಳಿಸಲು ಹೇಳಿದಾಗ ಶ್ರೀಮತಿ ಮೇರಮ್ಮ 'ಪ್ರೇಮ ಜ್ಯೋತಿ' ಮಹಾಸಂಗದ ಅಧ್ಯಕ್ಷರು ಲೇಬರ್ ಕಾರ್ಡ್ ನಿಂದ ಸಿಗುವ ಸೌಲಭ್ಯ, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಪಡೆದುಕೊಂಡ ಕೂಲಿಯ ಕುರಿತು ಮಾತನಾಡಿದರು. ಈ ಒಕ್ಕೂಟದಲ್ಲಿ 15 ಮಹಿಳೆಯರು ಭಾಗವಹಿಸಿ ಸರ್ಕಾರದಿಂದ ಪಡೆದುಕೊಂಡ ಸೌಲಭ್ಯಗಳ ಕುರಿತು ಮಾತನಾಡಿದರು.

## “ಸಂಘ ಮಹಾಸಂಗ ಮತ್ತು ನರೇಗಾ ಗುಂಪಿನ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ ಕುರಿತು ತರಬೇತಿ”



ಫೆಬ್ರುವರಿ 5 2024 ರಂದು ಹುಮ್ನಾಬಾದ್ ತಾಲೂಕಿನ ಸಿತಾಳಗೇರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಹಯೋಗದಲ್ಲಿರುವ ಸಂಘ ಮಹಾಸಂಗ ಮತ್ತು ನರೇಗಾ ಗುಂಪಿನ ಸದಸ್ಯರಿಗೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಅಮಿತಾ ‘ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ’ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು ಶ್ರೀಮತಿ ನಿರ್ಮಲ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದರ ಕುರಿತು ಮಾತನಾಡಿದರು. ಸರ್ಕಾರದಿಂದ ಸಿಗುವ ಸೌಲತ್ತು ಯಾವ ರೀತಿ ಸದ್ಬಳಕೆ ಮಾಡಿಕೊಳ್ಳಬೇಕು ಎಂಬುದರ ಕುರಿತು ತಿಳಿಸಿದರು. ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಗ್ರಾಮದ ಜನರು ಒಟ್ಟು ಸೇರಿ ನಾಯಕತ್ವವನ್ನು ಬೆಳೆಸಿಕೊಂಡು ಗ್ರಾಮ ಪಂಚಾಯಿತಿಗಳಿಗೆ ಹೋಗಿ ಅರ್ಜಿಗಳನ್ನು ಕೊಡುವುದು ಮತ್ತು ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗೆ ಅರ್ಜಿ ಕೊಡುವುದರೊಂದಿಗೆ ಬರುವಂತಹ ಸರ್ಕಾರದ ಸಂಪನ್ಮೂಲವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ತರಬೇತಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಿದರು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರು ಉಪಸ್ಥಿತರಿದ್ದರು, 48 ಜನ ಗ್ರಾಮಸ್ಥರು ಭಾಗವಹಿಸಿ ಸಂಪನ್ಮೂಲ ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು ಎಂಬುದರ ಕುರಿತು ತಿಳಿದುಕೊಂಡರು.



## “ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ತರಬೇತಿ”

ಫೆಬ್ರುವರಿ 7 2024 ರಂದು ಹುಮ್ನಾಬಾದ್ ತಾಲೂಕಿನ ಓತಗಿ ಗ್ರಾಮದಲ್ಲಿ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸಬಿತಾ ‘ಮೇರಿ ಮಹಾಸಂಗದ ಮಹಿಳೆಯರಿಗೆ ಅರಿವಿನ ಜಾಗೃತಿ ಪದ ಹಾಗೂ ಚಟುವಟಿಕೆಗಳ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ತರಬೇತಿಯನ್ನು ಹಮ್ಮಿಕೊಂಡಿದರು. ಪಂಚಾಯತ್ ರಾಜ್ ವ್ಯವಸ್ಥೆಯ ಮಹತ್ವವೇನು? ವಾರ್ಡ್ ಸಭೆ, ಗ್ರಾಮ ಸಭೆಯಲ್ಲಿ ಚರ್ಚಿಸುವಂತಹ ವಿಷಯಗಳು ಯಾವುವು? ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆಯಲ್ಲಿ ಕಡ್ಡಾಯವಾಗಿ ಮಹಿಳೆಯರು ಮತ್ತು ಮಕ್ಕಳು ಭಾಗವಹಿಸಿ ತಮಗಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಪ್ರಯತ್ನಿಸಬೇಕೆಂದು ತಿಳಿಸಿದರು. 23 ಸದಸ್ಯರು ಭಾಗವಹಿಸಿ ಗ್ರಾಮ ಸಭೆಯಲ್ಲಿ ಭಾಗವಹಿಸುವುದರಿಂದ ಗ್ರಾಮದಲ್ಲಿ ನಡೆಯುವಂತಹ ಕಾರ್ಯ ಚಟುವಟಿಕೆಗಳ ಸಂಪೂರ್ಣ ಮಾಹಿತಿ ನಮಗೆ ತಿಳಿಯುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.



## “ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿ ಕುರಿತು ತರಬೇತಿ”




ಫೆಬ್ರುವರಿ 2 2024 ರಂದು ಚಿಟಗುಪ್ಪ ತಾಲೂಕಿನ ಬೆಳಕೇರ ಗ್ರಾಮದಲ್ಲಿ ‘ಮಲ್ಲಿಗೆ’ ಮಹಾಸಂಗದ ಪದಾಧಿಕಾರಿಗಳಿಗೆ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿ ಕುರಿತು ತರಬೇತಿ ಹಮ್ಮಿಕೊಳ್ಳಲಾಗಿತ್ತು. ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ರಿಟಾ ಅವರು ಸಂದೇಶವನ್ನು ಗುಂಪಿನ ಸದಸ್ಯರಿಗೆ ಕಿವಿಯಿಂದ ಕಿವಿಗೆ ರವಾನಿಸುವುದರ ಮೂಲಕ ಕೊನೆಯ ಸದಸ್ಯರ ತನಕ ಏನು ಬರುತ್ತದೆ ಎಂದು ತಿಳಿದುಕೊಂಡು, ಆ ವಿಷಯದ ಮೇಲೆ ವಿಮರ್ಶಿಸುತ್ತಾ, ಸಂವಹನ ಎಂದರೆ ಅನಿಸಿಕೆ, ಭಾವನೆಗಳನ್ನು ವ್ಯಕ್ತಪಡಿಸುವುದು. ಎನ್ನುವ ವಿಷಯವನ್ನು ಚಟುವಟಿಕೆ ಮೂಲಕ ಸಂಕ್ಷಿಪ್ತವಾಗಿ ವಿವರಿಸಿದರು. ಈ ತರಬೇತಿಯಲ್ಲಿ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು, ಆರ್ಬಿಟ್ ಕಾರ್ಯಕರ್ತರು ಮತ್ತು ಮಹಾಸಂಗದ ಪದಾಧಿಕಾರಿಗಳು ಭಾಗವಹಿಸಿ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆಯ ಕುರಿತು ತರಬೇತಿಯನ್ನು ಪಡೆದುಕೊಂಡರು.

ಫೆಬ್ರವರಿ 22 2024 ರಂದು ಬಸವಕಲ್ಯಾಣ್ ತಾಲೂಕಿನ ರಾಜೇಶ್ವರ ಗ್ರಾಮದಲ್ಲಿ ಸಂಘದ ಸದಸ್ಯರಿಗೆ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ತರಬೇತಿ ಹಮ್ಮಿಕೊಳ್ಳಲಾಯಿತು ಸಂಸ್ಥೆಯ ಸ್ಥಳೀಯ ಸಂಯೋಜಕೀಯಾದ ಸಿಸ್ಟರ್ ಎಡ್ನವರು ಸಂವಹನ ಎಂದರೇನು ? ಎಂದು ಪ್ರಶ್ನೆ ಮಾಡುತ್ತ ಸಂವಹನ ಎಂದರೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಥವಾ ವಿವಿಧ ರೀತಿಯ ಸಂಕೇತಗಳ ಮೂಲಕ ವಿಚಾರಗಳು ಹರಡುವ ರೀತಿಯೇ ಸಂವಹನ ಎಂದು ತಿಳಿಸಿದರು, ಉದಾಹರಣೆ ಸಮಾನ ಮಾಧ್ಯಮಗಳಾದ ರೇಡಿಯೋ, ಪತ್ರಿಕೆಗಳು, ದೂರದರ್ಶನ, ಗಣಕಯಂತ್ರ, ಮಾಧ್ಯಮಗಳು ಸಂವಹನ ಕ್ರಿಯೆಗೆ ಮಧ್ಯವರ್ತಿಯಾಗಿ ಕೆಲಸ ಮಾಡುತ್ತವೆ ಎಂದು ಮಾಹಿತಿ ನೀಡಿದರು. ಈ ಒಂದು ತರಬೇತಿಯನ್ನು ಮಹಿಳಾ ಸಬಲೀಕರಣದ ಕಾರ್ಯಕರ್ತೆಯಾದ ಶ್ರೀಮತಿ ಕಲ್ಪನಾ ರವರು ಏರ್ಪಡಿಸಿದರು, ತರಬೇತಿಯಲ್ಲಿ ಒಟ್ಟು 18 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು.



## “ಮಾಧ್ಯಮ ಶಿಕ್ಷಣದ ಕುರಿತು ಅರಿವಿನ ಕಾರ್ಯಕ್ರಮ”



ಫೆಬ್ರವರಿ 26 2024ರಂದು ತಾಳಮಡಗಿ ಗ್ರಾಮದಲ್ಲಿ 18 ಮಹಿಳೆಯರಿಗೆ ಮಾಧ್ಯಮ ಶಿಕ್ಷಣದ ಕುರಿತು ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಅರುಣಕುಮಾರ್ ಮಾತನಾಡುತ್ತಾ ಶಿಕ್ಷಣದ ಮಹತ್ವ ಹಾಗೂ ಮಾಧ್ಯಮದ ಮಹತ್ವದ ಕುರಿತು ನೀಡಿದರು. ಇಂದಿನ ಸಮುದಾಯದಲ್ಲಿ ಮಹಿಳೆಯರು ನಾಯಕತ್ವದ ಸ್ವಭಾವವನ್ನು ಬೆಳೆಸಿಕೊಳ್ಳಬೇಕು, ರಾಜಕೀಯ ಸಹಭಾಗಿತ್ವದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಹಾಗೂ ಮತದಾನದ ಮಹತ್ವವನ್ನು ಅರಿಯಬೇಕು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು, ಆಧುನಿಕ ಯುಗದಲ್ಲಿ ಮನುಷ್ಯನ ಜೀವನದ ಮೇಲೆ ಮಾಧ್ಯಮ ಯಾವ ರೀತಿಯಾಗಿ ಪ್ರಭಾವ ಬೀರಿದೆ ಎಂಬುದರ ಕುರಿತು ಮಹಿಳೆಯರಿಗೆ ಸವಿಸ್ತಾರವಾಗಿ ವಿವರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಹಿಳಾ ಅಭಿವೃದ್ಧಿ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ಅಮಿತಾ ಭಾಗವಹಿಸಿ ಕಾರ್ಯಕ್ರಮದ ವ್ಯವಸ್ಥಾಪನೆ ಮಾಡಿದರು.

## “ಹಾಕ್ಕೋತ್ತಾಯ ಜಾಲ ಬಂಧದ ಕುರಿತು ತರಬೇತಿ”



ಫೆಬ್ರವರಿ 7. 2024 ರಂದು ಭಾಲ್ಕಿ ತಾಲೂಕಿನ ಹಲಬರ್ಗಾ ಗ್ರಾಮದಲ್ಲಿ ಐದು ಸಂಘದ ಸದಸ್ಯರಿಗೆ ಹಾಕ್ಕೋತ್ತಾಯ ಜಾಲ ಬಂಧದ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರು ಫಾದರ್ ವಿಜಯ್ ಕುಮಾರ್ ವಿವರಣೆ ನೀಡುತ್ತಾ ಮತದಾನದ ಹಕ್ಕಿನ ಮಹತ್ವ, ಅರ್ಜಿ ಹಾಕುವುದು, ಮನವಿ ಕೊಡುವುದು, ಧರಣಿ, ಸತ್ಯಾಗ್ರಹ, ಕಾಡ್ ಚಳುವಳಿ, ಮಾನವ ಸರಪಳಿ, ಹಕ್ಕೊತ್ತಾಯದ ಬಗ್ಗೆ ಸಂಪೂರ್ಣವಾಗಿ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 67 ಸದಸ್ಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

### “ಬೆಳವಣಿಗೆಯಲ್ಲಿ ಕುಂಟಿತ ಹೊಂದಿದ ಮಕ್ಕಳಿಗೆ ಚಟುವಟಿಕೆ ಮುಲಕ ಚಿಕಿತ್ಸೆ”



ಫೆಬ್ರವರಿ 23. 2024 ರಂದು ಹುಮನಾಬಾದ ತಾಲೂಕಿನ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ಶಿವನಗರ ಕಾಲೋನಿ ಹಾಗು ಜನತಾ ಕಾಲೋನಿಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ವಿಶೇಷ ವಿಕಲ ಚೇತನ ಮಕ್ಕಳ ಪೋಷಕರಿಗೆ ಮಗುವಿನ ಹಿನ್ನೆಲೆಯನ್ನು ತಿಳಿದುಕೊಳ್ಳಲು ಆಪ್ತ ಸಮಾಲೋಚನೆ ಮಾಡಲಾಯಿತು. ಆಪ್ತ ಸಮಾಲೋಚನೆ ಮಾಡಿ ಮಗುವಿನ ನ್ಯೂನತೆಯನ್ನು ಕಂಡುಕೊಂಡು ಪೋಷಕರ ಸಹಾಯದಿಂದ ಮಕ್ಕಳಿಗೆ ಚಟುವಟಿಕೆಯ ಮುಖಾಂತರ ಬದಲಾವಣೆ ತರಲಾಗುತ್ತಿದೆ. ಪೋಷಕರು ಮಕ್ಕಳ ಬದಲಾವಣೆಯನ್ನು ಕಂಡು ಅರ್ಬಿಟ್ ಸಂಸ್ಥೆಯವರು ಉತ್ತಮವಾದ ಕೆಲಸ ಮಾಡುತ್ತಿದ್ದಾರೆ, ನಮ್ಮ ಮಕ್ಕಳ ಜೀವನಕ್ಕೆ ಬೇಳಕಾಗಿ ನಿಂತಿದ್ದಾರೆ ಎಂದು ಸಂತೋಷದಿಂದ ಧನ್ಯವಾದಗಳು ವ್ಯಕ್ತಪಡಿಸಿದ್ದಾರೆ.



### “ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಸಾಧನ ಸಲಕರಣೆಗಳ ಉಪಯೋಗಿಸುವಿಕೆ”



ಫೇಬ್ರವರಿ 3 2024 ರಂದು ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಸಂಯೋಜಕರಾದ ಶ್ರೀಮತಿ ಮಮತಾ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಮನೆಗೆ ಭೇಟಿ ನೀಡಿ. ಪೋಷಕರಿಗೆ ಸಾಧನ ಸಲಕರಣೆಯ ಉಪಯೋಗದ ಬಗ್ಗೆ ತಿಳಿಸಿ ಅದನ್ನು ಯಾವರೀತಿಯಾಗಿ ಉಪಯೋಗಿಸಬೇಕೆಂದು ಚಟುವಟಿಕೆ ಮುಖಾಂತರ ಪೊಷಕರಿಗೆ ತಿಳಿಸಲಾಯಿತ್ತು. ಪೋಷಕರು ಆರ್ಬಿಟ್ ಸಂಸ್ಥೆ ಮಾಡುತ್ತಿರುವ ಸಹಾಯದ ಕುರಿತು ಧನ್ಯವಾದಗಳು ತಿಳಿಸುತ್ತಾ ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ನಮ್ಮ ಮಗು ಗುರುತಿಸಿ ವಿವಿಧ ರೀತಿಯ ಚಟುವಟಿಕೆಗಳ ಮುಖಾಂತರ ಹಾಗೂ ಪೋಷಣೆಯುಕ್ತ ಆಹಾರ ನೀಡುವುದರ ಮೂಲಕ ನಮ್ಮ ಮಗುವಿನ ಬೆಳವಣಿಗೆಗೆ ತುಂಬಾ ಸಹಾಯ ಮಾಡುತ್ತಿದೆ ಎಂದರು.

## “ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ”



ಹುಮನಾಬಾದ ತಾಲೂಕಿನ ಕುಮಾರ್ ಚಿಂಚೋಳಿ ಸರ್ಕಾರಿ ಉರ್ದು ಪ್ರೌಢ ಶಾಲೆಯಲ್ಲಿ ಫೆಬ್ರುವರಿ 22 2024 ರಂದು ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಕ್ಯಾನ್ಸರ್ ಎಂದರೇನು? ಲಕ್ಷಣಗಳು, ಬರಲು ಕಾರಣ ಹಾಗೂ ಕ್ಯಾನ್ಸರ್ ರೋಗದಿಂದ ಹೇಗೆ ಕಾಪಾಡಿಕೊಳ್ಳಬೇಕೆಂದು ತಿಳಿಸುತ್ತಾ ಅತಿಯಾಗಿ ತಂಬಾಕು, ಗುಟ್ಕಾ ಸೇವನೆಯಿಂದ ಹಾಗೂ ಮದ್ಯಪಾನ ಸೇವನೆಯಿಂದ ಕ್ಯಾನ್ಸರ್ ರೋಗ ಬರುತ್ತದೆ. ಕ್ಯಾನ್ಸರ್ ರೋಗಿಗಳು ಹೆಚ್ಚಾಗಿ ಹಣ್ಣುಗಳು ತರಕಾರಿಗಳು ಮತ್ತು ಪೋಷಕಾಂಶಯುಕ್ತ ಆಹಾರ ಸೇವನೆ ಮಾಡಬೇಕೆಂದು ಸಲಹೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರು ಮತ್ತು ಮಕ್ಕಳು ಸೇರ 90 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು.

# ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ

## “ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



ಫೆಬ್ರವರಿ 22 2024 ರಂದು ಆರ್ಬಿಟ್ ಸಂಸ್ಥೆ ಹಾಗೂ ಎಲ್ ಎಲ್ ಎಲ್ ಎಫ್ ಸಂಯುಕ್ತ ಆಶ್ರಯದಲ್ಲಿ ಭಾಲ್ಕಿ ತಾಲೂಕಿನ ಅಳವಾಯಿ ಗ್ರಾಮದ ಲೋಕ ನಾಯಕ ಜಯ ಪ್ರಕಾಶ ಫ್ರೌಡ ಶಾಲೆಯ ಮಕ್ಕಳಿಗೆ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಮಾಡಲಾಯಿತು.ಈ ಕಾರ್ಯಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಯಾದ ಅಮರ ರವರು ಮಾತನಾಡುತ್ತಾ ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆ ಎಂದರೇನು? ಗುಣಲಕ್ಷಣಗಳು ಏನು? ಮಾನಸಿಕ ಖಾಯಿಲೆ ಸಂಬಂಧಿಸಿದ ಚಿಕಿತ್ಸೆ ಬಗ್ಗೆ ವಿವರವಾಗಿ ತಿಳಿಸಿದರು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಲೋಕ ನಾಯಕ ಜಯ ಪ್ರಕಾಶ ಫ್ರೌಡ ಶಾಲೆಯ ಒಟ್ಟು 66 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಫೆಬ್ರವರಿ 5 2024 ರಂದು ಔರಾದ್ ತಾಲ್ಲೂಕಿನ ಬಾದಲಗಾಂವ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಎಲ್ ಎಲ್ ಎಲ್ ಎಫ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಈ ಕಾರ್ಯಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ರಫಿಕ ಮಾತನಾಡುತ್ತಾ, ಮಾನಸಿಕ ಕಾಯಿಲೆ ಗುಣಲಕ್ಷಣಗಳು ಮತ್ತು ಮಾನಸಿಕ ಖಾಯಿಲೆ ಸಂಬಂಧಿಸಿದ ಚಿಕಿತ್ಸೆ ಬಗ್ಗೆ ವಿವರವಾಗಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು ಸಹ ಶಿಕ್ಷಕ ಹಾಗೂ ಒಟ್ಟು 25 ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಮಾನಸಿಕ ಆರೋಗ್ಯ' ಕುರಿತು ಜಾಗೃತಿ ಕಾರ್ಯಕ್ರಮ”



ಫೆಬ್ರವರಿ 27. 2024 ರಂದು ಬಸವಕಲ್ಯಾಣ ಪಟ್ಟಣದ ಮೌಲಾನ ಅಬ್ದುಲ್ ಕಲಾಂ ಅಜಾದ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ, ಆರ್ಬಿಟ್ ಸಂಸ್ಥೆಯ ನವಜೀವನ ಎಲ್ ಎಲ್ ಎಲ್ ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ 'ಮಾನಸಿಕ ಆರೋಗ್ಯ' ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕರ್ತೆಯಾದ ಶ್ರಿಮತಿ ಸುಜಾತ ಮಾತನಾಡುತ್ತ, ಮಾನಸಿಕ ಕಾಯಿಲೆಯು ಮನುಷ್ಯನ ಮೆದುಳಿನ ರಸಾಯನಿಕ ಕ್ರಿಯೆಗಳಲ್ಲಿ ಆಗುವ ಬದಲಾವಣೆಗಳಿಂದ ಮನುಷ್ಯನ ಮಾನಸಿಕ ಅಂಶಗಳಾದ ಯೋಚನೆ, ವರ್ತನೆ, ಭಾವನೆಗಳು ಮತ್ತು ನಡುವಳಿಕೆಯಲ್ಲಿ ವ್ಯತ್ಯಾಸ ಕಂಡುಬರುವುದು. ಮಾನಸಿಕ ಅಸ್ವಸ್ಥರನ್ನು ಪ್ರಾರಂಭಿಕ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಸೂಕ್ತವಾದ ತಪಾಸಣೆ, ಚಿಕಿತ್ಸೆ ಮೂಲಕ ಸಮಾಜದ ಮುಖ್ಯ ವಾಹಿನಿಗೆ ತಂದು, ಪುನರ್ವಸತಿ ಕಲ್ಪಿಸುವದೆ ಸಂಸ್ಥೆಯ ಗುರಿಯಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯ ಗುರುಗಳು, ಶಿಕ್ಷಕರು, ಮಕ್ಕಳು ಸೇರಿ 68 ಜನರು ಭಾಗವಹಿಸಿದ್ದರು.

## "ಮಾನಸಿಕ ಆರೋಗ್ಯ ಕುರಿತು ಜಾಗೃತಿ"



ಜನವರಿ 23 2024 ರಂದು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಲೋಕೇಶ ನಿಟ್ಟೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಮೂಡಿಸಿದರು. ಮಾನಸಿಕ ಅಸ್ವಸ್ಥರ ಲಕ್ಷಣಗಳು, ಏಕಾಂತವಾಗಿರುವುದು, ವಿನಾ: ಕಾರಣ ನಗುವುದು, ವಿನಾ: ಕಾರಣ ಅಳುವುದು, ವಿನಾ : ಕಾರಣ ಸಂಶೇಪಡುವುದು, ಕಿವಿಯಲ್ಲಿ ಶಬ್ದ ಕೇಳಿಸುವುದು ಇತ್ಯಾದಿ. ಮಾನಸಿಕ ಅಸ್ವಸ್ಥರಾಗಲು ಕಾರಣಗಳು ಬಾಲ್ಯದ ಕಹಿ ನೆನಪುಗಳು, ಸಾಲಬಾಧೆ, ಅಂತಸ್ತು ಕಳೆದುಕೊಳ್ಳುವುದು, ಆಕಸ್ಮಿಕ ದುರ್ಘಟನೆಗಳು ನಡೆಯುವುದು ಇತ್ಯಾದಿ. ಮಾನಸಿಕ ಅಸ್ವಸ್ಥರ ಲಕ್ಷಣಗಳನ್ನು ಕಂಡು ಭಾನಮತಿ, ದೆವ್ವ, ಭೂತ, ಮಾಟ ಮಂತ್ರ ಮಾಡಿರುತ್ತಾರೆ ಎಂಬ ಜನರು ಭಾವಿಸುತ್ತಾರೆ. ಮೇಲಿನ ಲಕ್ಷಣಗಳು ಕಂಡು ಬಂದಲ್ಲಿ ಮನೋವೈದ್ಯರಿಂದ ಚಿಕಿತ್ಸೆ ಪಡೆದು ಉತ್ತಮ ಜೀವನ ನಡೆಸಬೇಕೆಂದು ತಿಳಿಸಲಾಯಿತು.

## "ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ"



ಫೆಬ್ರುವರಿ 21 2024 ರಂದು ಬಸವಕಲ್ಯಾಣ ತಾಲೂಕಿನ, ರಾಜೇಶ್ವರ್ ಗ್ರಾಮದ ಸರ್ಕಾರಿ ಕನ್ಯಾ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಮತ್ತು ನವಜೀವನ ಎಲ್ ಎಲ್ ಎಲ್ ಎಫ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ವಿಜಯಕುಮಾರ್ ಅವರು ಮಾತನಾಡಿದರು. ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಈ ಕಾಯಿಲೆ ಬರಲು ಕಾರಣಗಳು, ಮಾನಸಿಕ ಕಾಯಿಲೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳ ಬಗ್ಗೆ ತಿಳಿಸಿದರು. ಮಾನಸಿಕ ಅಸ್ವಸ್ಥರನ್ನು ಪ್ರಾರಂಭದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾಮಾನಸಿಕ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಉಚಿತ ವೈದ್ಯಕೀಯ ತಪಾಸಣೆ ಹಾಗೂ ಚಿಕಿತ್ಸೆಯ ಮೂಲಕ ಮಾನಸಿಕ ಅಸ್ವಸ್ಥರನ್ನು ಸಮಾಜದ ಮುಖ್ಯ ವಾಹಿನಿಗೆ ತಂದು ಪುನರ್ವಸತಿ ಕಲ್ಪಿಸುವದೆ ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯ ಗುರುಗಳು ಶಿಕ್ಷಕರು ಮಕ್ಕಳು ಸೇರಿ ಒಟ್ಟು 109 ಜನರು ಭಾಗವಹಿಸಿ ಇದರ ಮಾಹಿತಿ ಹಾಗು ಸದುಪಯೋಗ ಪಡೆದುಕೊಂಡರು.

## "ಕ್ಯಾನ್ಸರ್ ದಿನಾಚರಣೆ ಪ್ರಯುಕ್ತ ಜಾಗೃತಿ ಕಾರ್ಯಕ್ರಮ"



ಫೆಬ್ರವರಿ 08 2024 ರಂದು ಭಾಲ್ಕಿ ತಾಲೂಕಿನ ಲಖನಗಾಂವ ಗ್ರಾಮದ ಸರ್ಕಾರಿ ಮಾದರಿ ಪ್ರೌಢ ಶಾಲೆಯ ಮಕ್ಕಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಅಶ್ವಿನಿ ಮಾಹಿತಿ ನೀಡಿದರು. ಕ್ಯಾನ್ಸರ್ ದಿನಾಚರಣೆ ಪ್ರಯುಕ್ತ ಕ್ಯಾನ್ಸರ್ ರೋಗದ ಲಕ್ಷಣ ಹಾಗೂ ಕ್ಯಾನ್ಸರ್ ರೋಗದ ಚಿಕಿತ್ಸೆಯ ಬಗ್ಗೆ ತಿಳಿಹೇಳಲಾಯಿತು, ಕ್ಯಾನ್ಸರ್ ರೋಗ ಎಂದರೇನು? ಕ್ಯಾನ್ಸರ್ ಹೇಗೆ ಪತ್ತೆ ಹಚ್ಚಬೇಕು, ಕ್ಯಾನ್ಸರ್‌ನ ವಿವಿಧ ವಿಧಗಳು ಹಾಗೂ ಕ್ಯಾನ್ಸರ್ ಬರದಂತೆ ಹೇಗೆ ಎಚ್ಚೆತ್ತುಕೊಳ್ಳಬೇಕು ಕ್ಯಾನ್ಸರ್‌ಗೆ ನೀಡುವ ಚಿಕಿತ್ಸೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡಲಾಯಿತು. ಜೊತೆಗೆ ಮಕ್ಕಳಿಗೆ ಯಾವ ರೀತಿ ಅರಿವು ಮೂಡಿಸಬೇಕು ಹಾಗೂ ಮಕ್ಕಳಿಗೆ ಯಾವುದೇಲ್ಲ ವಿಷಯದ ಬಗ್ಗೆ ತಿಳಿ ಹೇಳಬೇಕೆಂಬುದಾಗಿ ಸವಿಸ್ತರವಾಗಿ ತಿಳಿಸಲಾಯಿತು.

## "ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ"



ಫೆಬ್ರವರಿ 22 2024 ರಂದು ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಗುಡಪಳ್ಳಿ ಗ್ರಾಮದ ಸಾರ್ವಜನಿಕರಿಗೆ ಆರ್ಬಿಟ್ ಸಂಸ್ಥೆ ಹಾಗು ಎಲ್ ಎಲ್ ಎಲ್ ಎಫ್ ಸಹಯೋಗದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರಿ ಶಿವಕಾಂತ ಮಾನಸಿಕ ಅಸ್ವಸ್ಥರ ಬಗ್ಗೆ ಮಾತನಾಡಿದರು. ಇವರು ಮಾನಸಿಕ ಖಾಯಿಲೆ ಸಂಬಂಧಿಸಿದ ಚಿಕಿತ್ಸೆಯ ಕುರಿತು ವಿವರವಾಗಿ ತಿಳಿಸಿದರು.ಈ ಕಾರ್ಯಕ್ರಮದಲ್ಲಿ ಒಟ್ಟು 15 ಜನ ಸಾರ್ವಜನಿಕರು ಭಾಗವಹಿಸಿ ಮಾಹಿತಿ ಪಡೆದುಕೋಂಡರು.



ಫೆಬ್ರವರಿ 23 2024 ರಂದು ಔರಾದ್ ತಾಲೂಕಿನ ದಾಪಕಾ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆಯ ನವಜೀವನ ಹಾಗು ಎಲ್ ಎಲ್ ಎಲ್ ಎಫ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಮೂಡಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾದ ಶ್ರೀ ಬಬನ ಮಾತನಾಡಿದರು. ಮಾನಸಿಕ ಅಸ್ವಸ್ಥತೆಯ ಲಕ್ಷಣಗಳಾದ ಏಕಾಂತತೆ, ಯಾವುದೇ ಕಾರಣವಿಲ್ಲದೆ ನಗುವುದು, ಯಾವುದೇ ಕಾರಣವಿಲ್ಲದೆ ಅಳುವುದು, ಅವಿವೇಕದ ಅನುಮಾನ ಇತ್ಯಾದಿ. ಮಾನಸಿಕ ಅಸ್ವಸ್ಥತೆಗೆ ಕಾರಣಗಳಾದ ಬಾಲ್ಯದ ಕಹಿ ನೆನಪುಗಳು, ಸಾಲದ ಭಾರ, ಆಕಸ್ಮಿಕ ಅಪಘಾತಗಳು ಇತ್ಯಾದಿ. ಈ ಮೇಲಿನ ಲಕ್ಷಣಗಳು ಕಂಡು ಬಂದಲ್ಲಿ ಮನೋವೈದ್ಯರಿಂದ ಚಿಕಿತ್ಸೆ ಪಡೆದು ಉತ್ತಮ ಜೀವನ ನಡೆಸುವಂತೆ ತಿಳಿಸಿದರು.ಈ ಜಾಗೃತಿ ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಸೇರಿ ಒಟ್ಟು 62 ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



ಫೆಬ್ರವರಿ 26. 2024 ರಂದು ಔರಾದ್ ತಾಲ್ಲೂಕಿನ ಕಪ್ಪೆಕೇರಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಅರ್ಬಿಟ್ ಸಂಸ್ಥೆ ಮತ್ತು ಎಲ್ ಎಲ್ ಎಲ್ ಎಫ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗ್ರತಿ ಕಾರ್ಯಕ್ರಮ ನೀಡಿದರು. ಮಾನಸಿಕ ಖಾಯಿಲೆಗೆ ಸಂಬಂಧಿಸಿದ ಚಿಕಿತ್ಸೆ ಬಗ್ಗೆ ವಿವರವಾಗಿ ತಿಳಿಸಿದರು ಹಾಗೂ ಪ್ರತಿಯೊಬ್ಬರು ವೋಟರ್ ಐಡಿ ಮಾಡಿಸಿ ಕೊಳ್ಳುವ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲಿ ಸಂಪನ್ಮೂಲ ವ್ಯಕ್ತಿಗಳಾದ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಆನಂದ ಮತ್ತು ಯೋಹನ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಒಟ್ಟು 10 ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



ಫೆಬ್ರವರಿ 26. 2024 ರಂದು ಬಸವಕಲ್ಯಾಣ ಪಟ್ಟಣದ ಶ್ರೀ ಗುರು ಸಿದ್ದರಾಜ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಎಲ್ ಎಲ್ ಎಲ್ ಎಫ್ ಕಾರ್ಯಕ್ರಮದ ಸಹಯೋಗದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಮಾಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಎನ್ ಸೋಮನಾಥ ಮಾತನಾಡುತ್ತಾ, ಮಾನಸಿಕ ಆರೋಗ್ಯ ಎಂದರೇನು ಗುಣಲಕ್ಷಣಗಳು, ಚಿಕಿತ್ಸೆಯ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 30 ವಿದ್ಯಾರ್ಥಿಗಳು ಪಾಲ್ಗೊಂಡು ಮಾಹಿತಿ ಪಡೆದುಕೋಂಡರು.

## ಸೇವಾ ಸಂಗಮ ಸಂಸ್ಥೆ, ಕಲಬುರಗಿ

### "ಉಜ್ಜೀವನ ಕಾರ್ಯಕ್ರಮ"

### "ಪ್ರಧಾನ ಮಂತ್ರಿ ಉಜ್ವಲ ಯೋಜನೆ ಬಗ್ಗೆ ಮಾಹಿತಿ"



ಫೆಬ್ರುವರಿ 21 2024 ರಂದು ಸೇವಾಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆ ಅಡಿಯಲ್ಲಿ ಸೀತನೂರು ಮತ್ತು ನಂದುರ ಕೆ, ಉದನೂರು ಗ್ರಾಮಕ್ಕೆ ಭೇಟಿ ನೀಡಿ ಪ್ರಧಾನ ಮಂತ್ರಿ ಉಜ್ವಲ ಯೋಜನೆ ಬಗ್ಗೆ ಶ್ರೀಮತಿ ನಂದಿನಿ ಮತ್ತು ಇಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 115 ಕುಟುಂಬಗಳ ಸದಸ್ಯರು ಮಾಹಿತಿಯನ್ನು ಪಡೆದುಕೊಂಡರು. 72 ಕುಟುಂಬಗಳು ಗ್ಯಾಸ ಎಜೆನ್ಸಿ ಬಳಿ ಹೋಗಿ ಅರ್ಜಿಗಳನ್ನು ನೋಂದಣಿ ಮಾಡಿದರು. 52 ಕುಟುಂಬಗಳು ಭಾರತ್ ಗ್ಯಾಸ ವತಿಯಿಂದ ಉಚಿತವಾಗಿ ಗ್ಯಾಸ ಸಂಪರ್ಕ ಪಡೆದುಕೊಂಡರು. "ಗ್ರಾಮೀಣ ವಲಯದಲ್ಲಿ ಸ್ಥಳೀಯ ಸಂಪನ್ಮೂಲಗಳ ಸಮರ್ಥ ಬಳಕೆಯ ಫಲಿತಾಂಶವೇ, ಜನರ ಜೀವನಮಟ್ಟದ ಧನಾತ್ಮಕ ಸುಧಾರಣೆ."



ಕಲಬುರ್ಗಿ ಪಟ್ಟಣದಲ್ಲಿ 18 ಫೆಬ್ರುವರಿ 2024 ರಂದು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆ ಅಡಿಯಲ್ಲಿ 160 ಕುಟುಂಬಗಳಿಗೆ ಪ್ರಧಾನ ಮಂತ್ರಿ ಉಜ್ವಲ ಗ್ಯಾಸ ಯೋಜನೆ ಬಗ್ಗೆ ಅರಿವು ಮೂಡಿಸಿ, 112 ಅರ್ಜಿಗಳನ್ನು ನೋಂದಣಿಮಾಡಿ, 52 ಜನ ಮಹಿಳೆಯರಿಗೆ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ, ಪ್ರಧಾನ ಮಂತ್ರಿ ಉಜ್ವಲ ಗ್ಯಾಸನ್ನು ಭಾರತ್ ಗ್ಯಾಸ ಏಜೆನ್ಸಿಯ ವತಿಯಿಂದ ಉಚಿತವಾಗಿ ಕೊಡಿಸಲಾಯಿತು.

### "ಸ್ಥಳೀಯ ಸಂಪನ್ಮೂಲ ಯೋಜನೆಗಳ ಗುರುತಿಸುವಿಕೆಯ ಮತ್ತು ಸ್ಥಳೀಯ ಮಟ್ಟದ ಯೋಜನೆಗಳ ಬಗ್ಗೆ ಚರ್ಚೆ"



ಫೆಬ್ರುವರಿ 19 2024 ರಂದು ಕಲಬುರ್ಗಿ ಜಿಲ್ಲೆಯ, ಪರತಬಾದ ಗ್ರಾಮಕ್ಕೆ ತೆರಳಿ ಸೇವಾಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನವೀನ, ಸ್ಥಳೀಯ ಸಂಪನ್ಮೂಲ ಯೋಜನೆಗಳ ಗುರುತಿಸುವಿಕೆಯ ಮೂಲಕ, ಸ್ವ ಗ್ರಾಮದ ಅಭಿವೃದ್ಧಿಗೆ ಸಮುದಾಯ ಭವನದಲ್ಲಿ ಸೇರಿದ ಜನರು ಹಾಗು ಮುಖಂಡರು, ಸ್ಥಳೀಯ ಮಟ್ಟದ ಯೋಜನೆಗಳ ಬಗ್ಗೆ ಚರ್ಚಿಸುವ ಮೂಲಕ, ಸರಕಾರದ ಯೋಜನೆಗಳ ಅನುಗುಣವಾಗಿ ಇಲಾಖೆಗಳನ್ನುಗುರುತಿಸಿಕೊಂಡು ಗ್ರಾಮ ಪಂಚಾಯಿತಿ, ರೈತ ಸಂಪರ್ಕ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ ಮುಂತಾದ ಇಲಾಖೆಗಳ ಸೌಲಭ್ಯಗಳನ್ನು ಪಡೆದುಕೊಳ್ಳುವುದು ಹಾಗೂ ಸಮುದಾಯಿಕ ಸಂಸ್ಥೆಗಳೊಂದಿಗೆ ಸಭೆಯನ್ನು ಮಾಡುವುದು. ಈ ಮೇಲ್ಕಾಣಿಸಿದ ಸರಕಾರಿ ಇಲಾಖೆಗಳು ಗ್ರಾಮೀಣ ಭಾಗದಲ್ಲಿ ಇರುವುದರಿಂದ ಗ್ರಾಮದ ಜನರ ಅಭಿವೃಧಿಗೆ ಸಹಾಯಕವಾಗಿದ್ದು, ಗ್ರಾಮವನ್ನು ಉನ್ನತಿಕರಣಕ್ಕೆ ತರಲು ಸಹಕಾರಿಯಾಗಿವೆ. ಫೆಬ್ರವರಿ ತಿಂಗಳಿನಲ್ಲಿ ದೊರೆಯುವ ಯೋಜನೆಗಳು ಗ್ರಾಮ ಪಂಚಾಯತಿ ಅಡಿಯಲ್ಲಿ ಪ್ರಧಾನಮಂತ್ರಿ ಆವಾಸ ಯೋಜನೆ ಅರ್ಜಿಗಳು ಬಿಟ್ಟಿರುವುದು, ಶೌಚಾಲಯಗಳ ನಿರ್ಮಾಣ, ಕೃಷಿ ಇಲಾಖೆಯಲ್ಲಿ ಬಿತ್ತುವ ದಿಂಡು, ಪಲ್ಲಿನೇಗಿಲು, ಪೈಪುಗಳು, ಹಾಗೂ ಎರೆಹುಳು ಗೊಬ್ಬರಕ್ಕೆ ಅರ್ಜಿಸಲ್ಲಿಸುವ ಮೂಲಕ ಪಡೆದುಕೊಳ್ಳಲು ತಿಳಿಸಲಾಯಿತು. ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY) ಅಡಿಯಲ್ಲಿ 5 ಜನರಿಗೆ ಜೀವ ವಿಮೆ ಮಾಡಿಸಲಾಯಿತು. ಈ ಕಾರ್ಯಕ್ರಮದಲ್ಲಿ 15 ಜನ ರೈತ ಬಾಂಧವರು ಭಾಗವಹಿಸಿ ಮಾಹಿತಿ ಹಾಗು ಸೌಲಭ್ಯ ಪಡೆದು ಕೊಂಡರು.

# “ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ”

## “ಜೀವನ ಶೈಲಿ ಬದಲಿಸಿಕೋಳ್ಳಿ ಕ್ಯಾನ್ಸರ್‌ನಿಂದ ದೂರವಿರಿ: ಫಾದರ್ ವಿಕ್ಟರ್ ವಾಸ್”



ಕಲಬುರಗಿ: ಫರಹತಬಾದ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ “ವಿಶ್ವಕ್ಯಾನ್ಸರ್ ದಿನಾಚರಣೆಯ” ಪ್ರಯುಕ್ತ ಜಾಥಾ ಕಾರ್ಯಕ್ರಮವನ್ನು ಸೇವಾಸಂಗಮ ಸಂಸ್ಥೆ ಹಾಗೂ ಕಾರಿತಾಸ್ ಇಂಡಿಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಯಿತ್ತು. ಈ ಜಾಥಕ್ಕೆ ರಿಬ್ಬನ್ ಕತ್ತರಿಸುವ ಮೂಲಕ ಶ್ರೀ ಅಂಬರೀಶ್ ಉಡಚಣ ಸದಸ್ಯರು ಗ್ರಾಮ ಪಂಚಾಯತ ಫರಹತಬಾದ, ಶ್ರೀ ಶರಣಪ್ಪ ಮುಖ್ಯ ಗುರುಗಳು ಸರಕಾರಿ ಮಾದರಿ ಶಾಲೆ ಫರಹತಾಬಾದ ಹಾಗೂ ಫಾದರ್ ವಿಕ್ಟರ್ ವಾಸ್ ನಿರ್ದೇಶಕರು ಸೇವಾ ಸಂಗಮ ಸಂಸ್ಥೆ, ಕಲಬುರಗಿ ಚಾಲನೆಯನ್ನು ನೀಡಿದರು. ಗ್ರಾಮದ ಪ್ರತಿ ಬೀದಿಯಲ್ಲಿ ಜಾಥ ಮುಲಕ ವಿಧ್ಯಾರ್ಥಿಗಳು ಕ್ಯಾನ್ಸರ್ ಜಾಗ್ರತಿಯ ಘೋಷಣೆಗಳನ್ನು ಕೂಗುತ್ತಾ ಜನರಲ್ಲಿ ಅರಿವು ಮೂಡಿಸಿದರು, ನಂತರ ಜಾಥದಲ್ಲಿ ಪಾಲ್ಗೊಂಡ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಫಾದರ್ ವಿಕ್ಟರ್ ವಾಸ್ “ಮಾನವ ಸಂಘ ಜೀವಿಯಾಗಿದ್ದಾನೆ, ಪ್ರತಿಯೊಬ್ಬರು ಜವಾಬ್ದಾರಿಯಿಂದ ಕ್ಯಾನ್ಸರ್ ಕುರಿತು ಅರಿವು ಮೂಡಿಸುತ್ತಾ ಹೋದರೆ ಮುಂದೊಂದು ದಿನ ಭಾರತವನ್ನು ಕ್ಯಾನ್ಸರ್ ಮುಕ್ತವಾಗಿ ಮಾಡಬಹು” ಎಂದು ನುಡಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಅಂಬರೀಶ್ ಉಡಚಣ “ಕ್ಯಾನ್ಸರ್‌ನಲ್ಲಿ ಹತ್ತು ಹಲವು ವಿಧಗಳಿದ್ದು ಅದರಲ್ಲಿ ರಕ್ತದ ಕ್ಯಾನ್ಸರ್ (ಬ್ಲಡ್ ಕ್ಯಾನ್ಸರ್) ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ ಮತ್ತು ಇದು ಅತ್ಯಂತ ಭಯಾನಕವಾದ ರೋಗವಾಗಿದೆ” ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಕ್ಕಳಿಗೆ ಕ್ಯಾನ್ಸರ್ ರೋಗದ ಕುರಿತು ಮಾಹಿತಿಯನ್ನು ನಿಡಿದಂತಹ ಫಾದರ್ ದೀಪಕ್ ಅವರು ಕ್ಯಾನ್ಸರ್ ಮನುಷ್ಯನ ಪಾಲಿಗೆ ಅತ್ಯಂತ ಭಯಾನಕವಾಗಿದೆ, ಈ ರೋಗದಿಂದ ಬಳಲುತ್ತಿರುವವರು ಎಷ್ಟೇ ದುಡ್ಡುಖರ್ಚು ಮಾಡಿದರು ಕೂಡ ಬದುಕುವ ಸಾಧ್ಯತೆ ತುಂಬ ಕಡಿಮೆ ಇರುತ್ತದೆ. ಆದ್ದರಿಂದ ಈ ರೋಗಕ್ಕೆ ತುತ್ತಾಗದೆ ಅದಕ್ಕೂ ಮೊದಲೆ ಇದರ ಕುರಿತು ಅರಿತುಕೊಂಡು ಉತ್ತಮವಾದ ಆಹಾರ ಸೇವನೆ ಮಾಡುವ ಮೂಲಕ, ದುಶ್ಚಟಗಳಿಂದ ದೂರ ಉಳಿದು ಕ್ಯಾನ್ಸರ್ ಮುಕ್ತ ಸಮಾಜವನ್ನು ಕಟ್ಟೋಣ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಹಶಿಕ್ಷಕರು ಸ್ಥಳಿಯ ಸಮಾಜ ಸೇವಾ ಸಂಸ್ಥೆಯ ಮುಖಂಡರು ಹಾಗೂ ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀ ರಾಜಕುಮಾರ ನಿರೂಪಿಸಿ, ಶ್ರೀಮತಿ ಸ್ವಾತಿ ಸ್ವಾಗತಿಸಿ, ಶ್ರೀ ಚಂದ್ರಕಾಂತ ವಂದಿಸಿದರು.







## “ಉಚಿತ ಆರೋಗ್ಯ ತಪಾಸಣಾ ಶಿಬಿರ”



ಫೆಬ್ರವರಿ 29.2024 ರಂದು ಕಲಬುರಗಿ ತಾಲ್ಲೂಕಿನ ಜೋಗುರ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಸಂಯುಕ್ತಾಶ್ರಯದಲ್ಲಿ ಜೋಗುರ ಗ್ರಾಮದ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನಿಡಲಾಯಿತು. ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ್ ಮಾತನಾಡುತ್ತಾ, ಕಾಲಕಾಲಕ್ಕೆ ಸರಿಯಾದ ತಪಸಣೆಯು ಕ್ಯಾನ್ಸರ್‌ನಿಂದ ಆಗುವ ದುಷ್ಪರಿಣಾಮಗಳನ್ನು ತಗ್ಗಿಸಬಹುದು, ಈ ಆರೋಗ್ಯ ತಪಾಸಣಾ ಶೀಬಿರದ ಸದುಪಯೋಗ ಗ್ರಾಮದ ಜನರು ಹೆಚ್ಚಿನ ಪ್ರಮಾಣದಲ್ಲಿ ಪಡೆಯುವಂತೆ ತಿಳಿಸಿದರು. ಕಾರ್ಯಕ್ರಮಕ್ಕೆ ಬಸವಪಟ್ಟಣ ಪಂಚಾಯತ ಪಿಡಿಓ ಹರಳಯ್ಯರಾಯ ದೇಸಾಯಿ ಮತ್ತು ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂಯೋಜಕರಾದ ಶ್ರೀನಿಧಿ ಡಾ.ಅಕ್ಷತಾಯಾದವ ಹಾಗೂ ಶ್ರೀಮತಿ ಮಂಗಲಾ (ಜೋಗುರ) ಪಿಎಚ್‌ಸಿ ಯ ಸಹಾಯಕಿ, ಉಮೇಶ ಗ್ರಾಮ ಪಂಚಾಯತ ಸದಸ್ಯರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದು, ಬಸವಪಟ್ಟಣ ಗ್ರಾಮ ಪಂಚಾಯತಿಯ ಹರಳಯ್ಯರಾಯ ದೇಸಾಯಿರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ಈ ಆರೋಗ್ಯ ತಪಾಸಣಾ ಶಿಬಿರದ ಪ್ರಯೋಜನವನ್ನು ಊರಿನ ಜನರೆಲ್ಲರು ಪಡೆದುಕೊಳ್ಳಬೇಕು, ಈ ಶೀಬಿರದಲ್ಲಿ ವಿಶೇಷವಾಗಿ ಗರ್ಭಕೋಶ ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಮತ್ತು ಸ್ತನ ಕ್ಯಾನ್ಸರ್, ಪರಿಕ್ಷೆ ಮಾಡಲಾಗುವುದು, ಆದ್ದರಿಂದ ಊರಿನ ಜನರು ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿ ಶಿಬಿರದ ಸದುಪಯೋಗವನ್ನು ಪಡೆಯಬೇಕೆಂದು ತಿಳಿಸಿದರು.



## ಕ್ಯಾನ್ಸರ್ ಮುಕ್ತ ಸಮಾಜ ನಮ್ಮೆಲರ ಗುರಿಯಾಗಬೇಕು.



06.02.2024 ರಂದು ಕಲಬುಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮದ ಚೇತನ ಕೇಂದ್ರದಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಢೇಶ ಕಲಬುರಗಿ ಇವರ ಸಂಯುಕ್ತ ಆಶ್ರದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ರಾಜಕುಮಾರ ದೇವರಮನಿ ಇವರು ಸಾಮಾನ್ಯವಾಗಿ ನೂರಕ್ಕೂ ಹೆಚ್ಚು ರೋಗಗಳ ಗುಂಪಿಗೆ ಕ್ಯಾನ್ಸರ ಎನ್ನುವರು, ಇದರಲ್ಲಿ ಅನೇಕ ವಿಧದ ಕ್ಯಾನ್ಸರ್‌ಗಳಿವೆ. ನಮ್ಮ ಕರ್ನಾಟಕದಲ್ಲಿ ಸಾವಿರಾರು ಜನರು ಇದಕ್ಕೆ ಬಲಿಯಾಗುತ್ತಿದ್ದಾರೆ. ಮೂರು ವಾರಕ್ಕಿಂತ ಹೆಚ್ಚು ಕಾಲ ಇರುವ ಬಾಯಿ ಹುಣ್ಣು, ರಕ್ತ ಕೆಮ್ಮುವುದು, ವಿವರಿಸಲಾಗದ ನೋವು, ದೇಹದಲ್ಲಿ ಧೀರ್ಘ ಕಾಲದವರೆಗೆ ನಿವಾರಿಸಲಾಗದ ಜ್ವರ, ಇನ್ನೂ ಹತ್ತು ಹಲವು ಲಕ್ಷಣಗಳ ಮೂಲಕ ಕ್ಯಾನ್ಸರನ್ನು ಪತ್ತೆ ಹಚ್ಚಬಹುದಾಗಿದೆ. ಕ್ಯಾನ್ಸರ್ ತಡೆಗಟ್ಟಲು ನಾವು ನೀವು ಪಾಲಿಸಬೇಕಾದ ಕೆಲವು ನಿಯಮಗಳೆಂದರೆ ತಂಬಾಕು ಸೇವನೆಯಿಂದ ದೂರವಿರುವುದು, ಆಲ್ಕೋಹಾಲ್ ಸೇವನೆ ಮಾಡದಿರವುದು, ಪ್ರತಿ ದಿನ ಹಣ್ಣುಗಳನ್ನು ತಿನ್ನುವುದು, ನಮ್ಮ ದೈನಂದಿನ ಆಹಾರದಲ್ಲಿ ಹೆಚ್ಚಿನ ಅಂಶ ಹಸಿರು ತರಕಾರಿ ಇರುವ ಆಹಾರ ಸೇವಿಸುವುದು, ಆಹಾರದಲ್ಲಿ ಕೊಬ್ಬಿನ ಅಂಶ ಕಡಿಮೆ ಇರುವ ಆಹಾರವನ್ನು ಸೇವನೆ ಮಾಡುವುದು ಹಾಗೂ ಪ್ರತಿದಿನ ವ್ಯಾಯಾಮ ಮಾಡುವುದು. ಈ ಎಲ್ಲಾ ಚಟುವಟಿಕೆಗಳು ಪ್ರತಿದಿನದ ದಿನಚರಿಯಲಿ ಪಾಲಿಸಿದರೆ ಕ್ಯಾನ್ಸರನಿಂದ ದೂರವಿರಬಹುದಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಫರಹತಬಾದ ಗ್ರಾಮದ ಅಂಗನವಾಡಿ ಶಿಕ್ಷಕಿಯರು, ಆಶಾ ಕಾರ್ಯಕರ್ತೆಯರು ಹಾಗು ತಾಯಂದಿರು ಭಾಗವಹಿಸಿರು.

## "ಕ್ಯಾನ್ಸರ್ ಕುರಿತು ಮಕ್ಕಳಲಿ ಜಾಗೃತಿ ಮುಡಿಸುವ ಕಾರ್ಯಕ್ರಮ"



20 ಫೆಬ್ರವರಿ 2024 ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ನಂದೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಂಜಿ ಫೌಂಡೇಶನ ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ "ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳಲಾಯಿತು." ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ದೇವರಮನಿ ಇವರು ಮಾತನಾಡಿ ಕ್ಯಾನ್ಸರ್ ರೋಗವು ಪ್ರಸ್ತುತ ಸಮಯದಲ್ಲಿ ಮನುಷ್ಯನಿಗೆ ಭಯಭಿತಗೊಳಿಸುವ ರೋಗಗಳಲ್ಲಿ ಒಂದಾಗಿದೆ, ಈ ರೋಗದ ಕುರಿತು ಸರಿಯಾಗಿ ಅರಿವಿಲ್ಲದ ಕಾರಣ ಅನೇಕ ಜನರು ಈ ರೋಗಕ್ಕೆ ತುತ್ತಾಗುತ್ತಿದ್ದಾರೆ, ಅದರಲ್ಲಿ ಕ್ಯಾನ್ಸರ್ ರೋಗವು ಬಂದಿದೆ ಎಂದು ತಿಳಿಯುವುದು ಕೊನೆಯ ಹಂತದಲ್ಲಿ ಅಥವಾ ಮೂರನೇ ಹಂತದಲ್ಲಿ ಪತ್ತೆಯಾಗುವುದರಿಂದ ಬದುಕುವ ಅವಕಾಶಗಳು ತಿರಾ ಕಡಿಮೆಯಾಗುತ್ತಿದೆ. ವೈಜ್ಞಾನಿಕವಾಗಿ ನಾವು ಎಷ್ಟೇ ಮುಂದುವರೆದರು ಈ ರೋಗದಿಂದ ಮನುಷ್ಯನನ್ನು ಬದುಕಿಸಿಕೊಳ್ಳುವಲ್ಲಿ ವೈದ್ಯರು ವಿಫಲರಾಗುತ್ತಿದ್ದಾರೆ, ಅದ್ದರಿಂದ ತಾವು ಈ ದಿನ ರೋಗದ ಕುರಿತು ಅರಿತುಕೊಳ್ಳುವುದು ಅವಶ್ಯಕವಾಗಿದೆ, ನಮ್ಮಆಹಾರ ಪದ್ಧತಿಯಿಂದ ಹಲವರು ಈ ರೋಗಕ್ಕೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಯುವ ಪಿಳಿಗೆ ಬಲಿಯಾಗುತ್ತಿದ್ದು ಇದಕ್ಕೆ ಮುಖ್ಯ ಕಾರಣ ಧೂಪಮಾನ, ಮದ್ಯಪಾನ ಸೇವನೆ ಮಾಡುವುದಾಗಿರುತ್ತದೆ, ಆದ್ದರಿಂದ ಮಕ್ಕಳು ಯಾವುದೇ ಕಾರಣಕ್ಕೂ ಈ ದುಷ್ಚಟಗಳಿಗೆ ಗುಲಮರಾಗದೆ, ಕ್ಯಾನ್ಸರನಂತಹ ರೋಗದಿಂದ ದೂರ ಉಳಿಯ ಬಹುದಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಲ ಶಿಕ್ಷಕರು ಹಾಗೂ ಮಕ್ಕಳು ಸೇರಿ 60 ಜನ ಭಾಗವಹಿಸಿದರು.

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

### "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ತರಬೇತಿ"



ಫೇಬ್ರವರಿ 17 2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜೀ ಪೌಂಡೇಷನ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವುಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಶ್ರೀಮತಿ ದಾಕ್ಷಾಯಣಿರವರು ಹೊನ್ನಕಿರಣಗಿ ಗ್ರಾಮದ ಸರಕಾರಿ ಹಿರಿಯ ಪ್ರೌಢ ಶಾಲೆಯಲ್ಲಿ 0–6 ವರ್ಷದಲ್ಲಿರುವ ವಯಸ್ಸಿನ ಮಕ್ಕಳಲ್ಲಿ ಬೇಳವಣಿಗೆಯಲ್ಲಿ ಕುಂಠಿತ ಇರುವುದರ ಬಗ್ಗೆ 8 ಮತ್ತು 9ನೇ ತರಗತಿಯ ಮಕ್ಕಳಿಗೆ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಕಾರ್ಯಕ್ರಮ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ 50 ವಿದ್ಯಾರ್ಥಿಗಳು, ಸಹ ಶಿಕ್ಷಕರು ಉಪಸ್ಥಿತರಿದ್ದರು. ನಿಮ್ಮ ಹಳ್ಳಿಯಲ್ಲಿ ಬೆಳವಣಿಗೆಯಲ್ಲಿ ನ್ಯೂನತೆ ಹೊಂದಿರುವ ಮಕ್ಕಳು ಹೇಗೆ ಇರುತ್ತಾರೆ ಎಂದರೆ ಉದಾ: 9 ತಿಂಗಳು ಆದರೂ ಅಂಬೆಗಾಲು ಇಡದೆ ಇರುವುದು, 1 ವರ್ಷದ ಮಗುವು ಸಹಜವಾಗಿ 50 ಪದಗಳನ್ನು ಆಡಬೇಕು, ಒಂದು ವೇಳೆ 2 ರಿಂದ 3 ಪದಗಳನ್ನು ಆಡುತ್ತಿದ್ದರೆ, ಆ ಮಗುವಿಗೆ ಮಾತಾನಾಡುವ ತೊಂದರೆ ಇದೆ ಎಂದು ತಿಳಿಯಬಹುದು ಮತ್ತು ಮಗುವಿಗೆ ದೂರದ ವಸ್ತುಗಳು ಕಾಣಿಸದೆ ಇರುವುದು, ಹಾಗೆ ಏನೆ ಶಬ್ದವನ್ನು ಮಾಡಿದ್ದರು ಆ ಮಗುವು ಪ್ರತಿಕ್ರಿಯೆ ಮಾಡದೇ ಇರುವುದು, ಒಂದೇ ಕೈಯಿಂದ ಮಗುವು ದಿನ ನಿತ್ಯದ ಚಟುವಟಿಕೆಗಳು ಮಾಡುತ್ತೀದ್ದರೆ ಹಾಗೆ ಒಂದೇಕಡೆ ಮಗುವು ಮಲಗಿದ್ದರೆಅಂತಹ ಮಕ್ಕಳನ್ನು CP ಮಗು ಎಂದುಕರೆಯುತ್ತೇವೆ. ಒಂದು ವರ್ಷ ಆದರೂ ನಡೆಯಲು ಬರದೇ ಇರುವುದು, ಮಂದ ದೃಷ್ಠಿ ಇರುವಂತಹ ಮಕ್ಕಳು ನಿಮ್ಮ ಮನೆಗಳಲ್ಲಿ ಅಥವಾ ನಿಮ್ಮ ಸುತ್ತಮುತ್ತಲಿನಲ್ಲಿ ಕಂಡು ಬಂದರೆ ನಮಗೆ ತಿಳಿಸಿರಿ ಎಂದು ದಾಕ್ಷಾಯಣಿ ಅವರು ತಿಳಿಸಿದರು.

## "POSCO ಕಾಯ್ದೆಯ ಕುರಿತು ಜಾಗೃತಿ ಕಾರ್ಯಕ್ರಮ"



ಫೆಬ್ರವರಿ 16.2024 ರಂದು ಕಲಬುರಗಿ ತಾಲ್ಲೂಕಿನ ಗರೂರ (ಬಿ) ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ವತಿಯಿಂದ POSCO ಕಾಯ್ದೆಯ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. POSCO ಎಂದರೆ? ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ. 2012 ರ POSCO ವಿಸ್ತೃತ ರೂಪ The Protection of children from sexual offences act 2012 ನವ್ಹೆಂಬರ್ 22 ರಂದು ಜಾರಿಗೆ ಬಂದಿದೆ. 18 ವರ್ಷದೊಳಗಿನ ಎಲ್ಲರನ್ನು ಮಕ್ಕಳೆಂದು ಕರೆಯುತ್ತಾರೆ. ಮಕ್ಕಳ ಮೇಲೆ ಮಾನಸಿಕ ಹಾಗು ಲೈಂಗಿಕ ದೌರ್ಜನ್ಯ ಆದರೆ ತುರ್ತಾಗಿ ವಿಚಾರಣೆ ಮಾಡಿ 6 ತಿಂಗಳ ಒಳಗಾಗಿ ತೀರ್ಪು ಕೊಡಬೇಕು ವರ್ಷಾನು ಗಟ್ಟಲೆ ತೆಗೆದುಕೊಂಡು ಹೋಗಬಾರದು. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದರೆ ಅವರ ಪೋಷಕರು ಶಾಲೆಯ ಶಿಕ್ಷಕ, ಶಿಕ್ಷಕಿ, ವೈದ್ಯರ ಹೇಳಿಕೆಯಿಂದ ಕೇಸನ್ನು ಮಹಿಳೆಯರೆ ತೆಗೆದು ಕೊಳ್ಳುವುದು ಮಕ್ಕಳನ್ನು ಬಲವಂತಪಡಿಸುವಂತಿಲ್ಲ, ಅಶ್ಲೀಲ ಚಿತ್ರಗಳನ್ನು ತೋರಿಸುವದು ಲೈಂಗಿಕ ಶೋಷಣೆಯಾಗಿದೆ. ಮಕ್ಕಳು ತಮ್ಮ ಹಕ್ಕುಗಳ ಕುರಿತು ಜಾಗರುಕರಾಗಿರುವ ಅವಶ್ಯ ಎಂದು ತಿಳಿಸಿದರು. 45 ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಅರಿವು ಕಾರ್ಯಕ್ರಮ



ಫೆಬ್ರವರಿ 21.2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ವತಿಯಿಂದ ಮೇಹೆಬೂಬ ನಗರದ ಅಂಗನವಾಡಿ ಕೇಂದ್ರ 4 ರಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತ್ತು. ಶ್ರೀಮತಿ ಗೋದಾವರಿ ಯಾದವ ಮೇಲ್ವಚಾರಕರು ಹಾಗೂ 18 ಜನ ಅಂಗನವಾಡಿ ಕಾರ್ಯಕರ್ತೆಯರು ಒಟ್ಟು 19 ಜನ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದರು. 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳನ್ನು ಪತ್ತೆ ಹಚ್ಚುವುದು, ಅಂದರೆ 1 ರಿಂದ 2 ವರ್ಷದ ಮಕ್ಕಳಲ್ಲಿ ಕತ್ತು ಕುಳಿತಿಲ್ಲದಿದ್ದರೆ, ನಡೆದಾಡುತ್ತಿಲ್ಲವಾದರೆ, ಮಾತುಬಾರದಿದ್ದರೆ ಆ ಮಕ್ಕಳಿಗೆ ಚಟುವಟಿಕೆಯ ಮೂಲಕ ಬದಲಾವಣೆಯನ್ನು ತರುವುದಾಗಿದೆ. ಅದರ ಜೋತೆ ಸರಕಾರಿ ಸೌಲಭ್ಯಗಳಾದ UDID ಕಾರ್ಡ ಹಾಗೂ Nirmay ಕಾರ್ಡ ಬಗ್ಗೆ ಮಾಹಿತಿ ನೀಡಲಾಯಿತ್ತು.

## "ಬೆಳವಣಿಗೆಯಲ್ಲಿ ಕುಂಠಿತವಿರುವ ಮಗುವಿಗೆ ಚಟುವಟಿಕೆ"



ಫೆಬ್ರವರಿ 2.2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ ಪ್ರೇಮಜಿ ಫೌಂಡೇಷನ ಸಂಯಕ್ತಾಶ್ರಯದಲ್ಲಿ ಅಂಬಿಕಾ ನಗರದ 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಗುವಿಗೆ ಸೊಂಟದ ಭಾಗದಲ್ಲಿ ಶಕ್ತಿ ಇಲ್ಲದಿರುವ ಕಾರಣ ಮಗುವಿಗೆ ಸಾಧನ ಸಲಕರಣೆ ಉಪಯೋಗಿಸಿಕೊಂಡು ಕುಳಿತುಕೊಳ್ಳುವ ಚಟುವಟಿಕೆ ಕುಮಾರಿ ಅನಿತಾ ಅವರು ಮಾಡಿದರು.

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಟೆಂಟ ಮಾಹಿತಿ ಕಾರ್ಯಕ್ರಮ



ಫೆಬ್ರವರಿ 16.2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಂಮಜಿ ಫೌಂಡೇಶನ ಸಂಯುಕ್ತಾಶಯದಲ್ಲಿ 0–6 ವರ್ಷದೋಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಗುರುತಿಸುವ ಸಲುವಾಗಿ ಟೆಂಟ ಅರಿವಿನ ಕಾರ್ಯಕ್ರಮವನ್ನು ಮಾಡಲಾಯಿತ್ತು. ಕಲಬುರಗಿ ಪ್ರದೇಶದಲ್ಲಿರುವ ಕೇಂದ್ರ ಬಸ್ ನಿಲ್ದಾಣ, ದರ್ಗ, ಸೂಪರ ಮಾರ್ಕೆಟ್‌ನಲ್ಲಿ ಕರಪತ್ರಗಳನ್ನು ಹಂಚುವುದರ ಮೂಲಕ ಜನರಿಗೆ ಮಾಹಿತಿ ನೀಡಲಾಯಿತು. ಇಂತಹ ಮಕ್ಕಳು ಸಿಕ್ಕರೆ "ಚೇತನ ಅರ್ಲಿ ಇಂಟರ ವೆನಷನ" ಗೆ ಶಿಫಾರಸ್ಸು ಮಾಡಿ ಎಂದು ತಿಳಿಸಲಾಯಿತ್ತು.

## "ಮಕ್ಕಳ ಬೇಳವಣಿಗೆಗೆ ಕೌಟುಂಬಿಕ ಪರಿಸರ ತುಂಬಾ ಮಹತ್ವವಾದ್ದುದು"



ಫೆಬ್ರವರಿ 22.2024 ರಂದು ಮಿಟ್ಟು ನಾಯಕ ಪ್ರೌಢ ಶಾಲೆಯಲ್ಲಿ ಮುಖ್ಯೋಪದ್ಯಾಯರ ಅನುಮತಿ ಪಡೆದುಕೊಂಡು, 8ನೇ ತರಗತಿಯ ವಿಧ್ಯಾರ್ಥಿ, ವಿಧ್ಯಾರ್ಥಿನೀಯರಿಗೆ ಸೇವಾ ಸಂಗಮ ಸಂಸ್ಥೆಯ ಕೋಟನೂರ (ಡಿ) ಕಾರ್ಯಕರ್ತರಾದ ಲಕ್ಷಣರಾವ ವಿ. ಹಳಿಮನಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ವಿದ್ಯಾರ್ಥಿಗಳಿಗೆ ಬೆಳವಣಿಗೆ ಕುಂಠಿತ ಹೊಂದಿರುವ ಮಕ್ಕಳ ಕುರಿತು ಅರಿವು ಮೂಡಿಸಲಾಯಿತ್ತು. ಮಕ್ಕಳ ಬೇಳವಣಿಗೆಗೆ ಕೌಟುಂಬಿಕ ಪರಿಸರ ತುಂಬಾ ಮಹತ್ವವಾದ್ದುದು, ಆದಕಾರಣ ಇದರಲ್ಲಿ ಮಕ್ಕಳ ಪಾಲಕರ ಪಾತ್ರ ತುಂಬಾ ಮಹತ್ವವಾದ್ದುದು, ವಿಧ್ಯಾರ್ಥಿಗಳು ಮನೆಯಲ್ಲಿ, ನೆರೆಹೊರೆ ಸಂಬಂಧಿಕರಲ್ಲಿ ಬೆಳವಣಿಗೆ ಕುಂಠಿತ ಇರುವಂತ ಮಕ್ಕಳು ಕಂಡು ಬಂದಲ್ಲಿ ಸೇವಾ ಸಂಗಮ ಸಂಸ್ಥೆಯವರಿಗೆ ಮಾಹಿತಿನೀಡಿ, ಇಂತ ಸ್ಥಿತಿಯಲ್ಲಿದ್ದ ಮಕ್ಕಳ ಸಮಾಜಿಕ, ಕೌಟುಂಬಿಕ, ಬೌಧಿಕವಾಗಿ ಬೇಳವಣಿಗೆಗೆ ಪ್ರೇರಣೆ ನೀಡುವ ಕೆಲಸ ಸಂಸ್ಥೆ ಮಾಡುತ್ತದೆ ಎಂದು ತಿಳಿಸಿದ್ದರು.

## "ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಬಗ್ಗೆ ಜಾಗೃತಿ ಕಾರ್ಯಕ್ರಮ"



ಫೆಬ್ರವರಿ 27. 2024 ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಬಸಪಟ್ಟಣ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಂಜಿ ಫೌಂಡೇಶನ ಕಲಬುರಗಿ ಇವರ ಸಂಯುಕ್ತ ಆಶ್ರದಲ್ಲಿ "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳಲಾಯಿತು. ಕಾರ್ಯಕ್ರವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ರಾಜಕುಮಾರ ದೇವರಮನಿ, ಸಮಾಜದಲ್ಲಿ ಪ್ರತಿಯೊಬ್ಬರಿಗೂ ಸಮಾನತೆಯಿಂದ ಹಾಗೂ ಸ್ವಾಲಂಬನೆಯಿಂದ ಬದಕುವ ಹಕ್ಕಿದೆ. ಮಕ್ಕಳ ಬೇಳವಣಿಗೆಯಲ್ಲಿ ಕಂಡುಬರುವ ನ್ಯೂನತೆಯುಳ್ಳ ಮಕ್ಕಳನ್ನು ನಾವು ವಿಶೇಷ ಆರೈಕೆಯ ಅವಶ್ಯಕತೆ ಇರುವ ಮಕ್ಕಳೆಂದು ಗುರುತ್ತಿಸುತ್ತೇವೆ. ಅವರು ಕೂಡ ನಮ್ಮೊಂದಿಗೆ ಶಿಕ್ಷಣ ಪಡೆಯಬಹುದು, ಸಮಾಜದಲ್ಲಿ ಜೀವಿಸುವ ಹಕ್ಕಿದೆ. ಅಂಗವಿಕಲರ ಹಕ್ಕುಗಳ ಕಾಯಿದೆ 2016 ರಡಿಯಲ್ಲಿ ಒಟ್ಟು 21 ಅಂಗವಿಕಲತೆಯನ್ನು ಗುರುತಿಸಲಾಗಿದೆ ಇದು ಅಂಗವಿಕಲರ ಹಕ್ಕುಗಳ ಒಡಂಬಡಿಕೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಾರ್ಯರೂಪಕ್ಕೆ ತರುಲು ಜಾರಿಗೊಳಿಸಿರುವ ಕಾಯಿದೆಯಾಗಿದೆ. ಈ ಕಾಯಿದೆ ಮೂಲಕ ಸರಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ಮಾಡಿದೆ, ಈ ಕಾರ್ಯಕ್ರಮಗಳ ಉದ್ದೇಶ ಅಂಗವಿಕಲರನ್ನು ಅಭಿವೃದ್ಧಿ ಪಡಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವುದಾಗಿರುತ್ತದೆ, ಇಂತಹ ಮಕ್ಕಳು ತಮ್ಮ ಅಕ್ಕ-ಪಕ್ಕದ ಮನೆಗಳಲ್ಲಿ ಅಥವಾ ತಮ್ಮ ಮನೆಗಳಲ್ಲಿ ಕಂಡು ಬಂದರೆ ನಮಗೆ ಮಾಹಿತಿ ನಿಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಹಾಗು ಮಕ್ಕಳು ಸೇರಿ ಒಟ್ಟು 60 ಜನರು ಭಾಗವಹಿಸಿದರು.

## "ಮಕ್ಕಳ ಬೆಳವಣಿಗೆ ಕುಂಠಿತಕ್ಕೆ ಉತ್ತೇಜಕ ಚಟುವಟಿಕೆ ರಾಮ ಬಾಣವಾಗಿದೆ"



ಕಲಬುರಗಿ ತಾಲ್ಲೂಕಿನಲ್ಲಿ ಬರುವ ಬಸನಾಳ ಗ್ರಾಮದಲ್ಲಿ ದಿನಾಂಕ 08.02.2024 ರಂದು ಬೆಳವಣಿಗೆ ಕುಂಠಿತ ಮಕ್ಕಳನ್ನು ಶಿಘ್ರವಾಗಿ ಗುರುತಿಸುವ ಮೂಲಕ ಆರಂಭಿಕ ಶಿಕ್ಷಣವನ್ನು ಪ್ರಾರಂಭಿಸುವ ಕುರಿತು ಟೆಂಟ್ ಜಾಗೃತಿ ಕಾರ್ಯಕ್ರಮವನ್ನು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಷನ ಕಲಬುರಗಿ ಇವರ ಸಂಯುಕ್ತ ಆಶ್ರದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲಿ ಕುಂಠಿತ ಮಕ್ಕಳನ್ನು ಗುರುತಿಸಲು ಅವರಿಗೆ ವಿಶ್ಲೇಷಣೆಯನ್ನು ಮಾಡುವ ಮೂಲಕ ಅವರ ಬೆಳಣಿಗೆಯಲ್ಲಿನ ನ್ಯೂನತೆಯನ್ನು ಗುರುತಿಸಿ, ಅದರಿಂದ ಮುಕ್ತಗೊಳಿಸಲು ಆ ನ್ಯೂನತೆಗೆ ಅನುಗುಣವಾಗಿ ಉತ್ತೇಜಕ ಚಟುವಟಿಕೆಗಳನ್ನು ನೀಡುವ ಮೂಲಕ ಮಕ್ಕಳಲ್ಲಿ ಬದಲಾವಣೆಯನ್ನು ತರಬಹುದಾಗಿದೆ ಎಂದು ಶ್ರೀ ರಾಜಕುಮಾರ ದೇವರಮನಿ ಸಾರ್ವಜನಿಕರಿಗೆ ಕರ ಪತ್ರವನ್ನು ಹಂಚುವ ಮೂಲಕ ಮಾಹಿತಿಯನ್ನು ನೀಡಿದರು.

## "ತಮ್ಮ ಮಕ್ಕಳ ಬೆಳವಣಿಗೆ ಕುರಿತು ಎಚ್ಚರ!"



02 ಫೆಬ್ರವರಿ 2024 ರಂದು ಕಲಬರುಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮದಲ್ಲಿ ಸರಕಾರದ ಐದು ಗ್ಯಾರಂಟಿ ಯೋಜನೆಗಳ ಕುರಿತು ಮಾಹಿತಿ ಕಾರ್ಯಕ್ರಮವನ್ನು ಗ್ರಾಮಪಂಚಾಯತ ಫರಹತಬಾದ ಹಾಗೂ ತಾಲ್ಲೂಕ ಆಡಳಿತ ಕಲಬುರಗಿ ಇವರ ಸಂಯುಕ್ತ ಆಶ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುತ್ತಲಿನ ಗ್ರಾಮದ ಸರಕಾರದ ಐದು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಭಾಗವಹಿಸಿದರು. ಇವರಿಗೆ ಸೇವಾಸಂಗಮ ಸಂಸ್ಥೆಯ ಪರಿಚಯ ಹಾಗು ಸಂಸ್ಥೆಯಲಿ ನಡೆಯುತ್ತಿರುವ ಕಾರ್ಯಕ್ರಮಗಳ ಕುರಿತು ಮಾಹಿತಿಯನು ನೀಡುವ ಮೂಲಕ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತ ಮಾಹಿತಿಯನ್ನು ಕರಪತ್ರವನ್ನು ಹಂಚುವ ಮೂಲಕ ನೀಡಲಾಯಿತು. ಬೆಳವಣಿಗೆಯಲಿ ಕುಂಠಿತ ಗೊಡಿರುವ ಮಕ್ಕಳನ್ನು ಗುರುತ್ತಿಸುವ ಮೂಲಕ ಅಂತಹ ಮಕ್ಕಳಿಗ ಉತ್ತೇಜಕ ಚಟುವಟಿಕೆಯನ್ನು ನೀಡುಲಾಗುತ್ತದೆ ಎಂದು ತಿಳಿಸಿದರು.

## ಯಶಸ್ಸಿನ ಕಥೆ



**ಹೆಸರು : ಅಂಬಿಕಾ**
**ತಂದೆ : ರಾಜಪ್ಪ**
**ತಾಯಿ : ಶಿವಾನಂದ**
**ವಯಸ್ಸು : 30**
**ಗ್ರಾಮ : ಕುಮಾರ ಚಿಂಚೋಳಿ**

**ಕುಟುಂಬದ ಹಿನ್ನೆಲೆ:–** ಅಂಬಿಕಾ ತಂದೆ ತಾಯಿ ಹಾಗು ತಮ್ಮನ ಜೊತೆ ತುಂಬಾ ಚೆನ್ನಾಗಿ ಇರುತ್ತಿದ್ದರು, ಅಂಬಿಕಾ ಪಿಯುಸಿಯಲ್ಲಿ ಉತ್ತೀರ್ಣರಾಗಿರುತ್ತಾರೆ, ತಂದೆ ಈ ಮುಂಚೆ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದು, ಸದ್ಯ ಕೂಲಿ ಕೆಲಸ ಮಾಡುತ್ತಾರೆ, ತಾಯಿಯು ಗೃಹಿಣೀಯಾಗಿರುತ್ತಾರೆ, ಕಾರಣಾಂತರಗಳಿಂದ ಖಿನ್ನತೆಗೆ ಒಳಗಾಗಿ ತೀವ್ರ ಮಾನಸಿಕ ಕಾಯಿಲೆಗೆ ತುತ್ತಾಗಿದ್ದಾರೆ.
**ಕಾಯಿಲೆಗೆ ಕಾರಣ:–** ತನ್ನ ತಾರುಣ್ಯಾವಸ್ಥೆಯ ಗೊಂದಲದಿಂದ ಅಂದರೆ ಅಂಬಿಕಾ ಒಬ್ಬ ಹುಡುಗನ ಪ್ರೀತಿ ಪ್ರೇಮ ಅನ್ನೋ ಮೋಹಕ್ಕೆ ಬಲಿಯಾಗಿ ಖಿನ್ನತೆಗೆ ಒಳಗಾಗಿರುತ್ತಾರೆ.
**ಕಾಯಿಲೆಯ ಲಕ್ಷಣಗಳು:–** ಯಾರ ಜೊತೆಯೂ ಮಾತನಾಡದೇ ಇರುವುದು, ರಾತ್ರಿ ವೇಳೆ ನಿದ್ರೆ ಮಾಡದೇ ಇರುವುದು, ಜೋರಾಗಿ ಚಿರುವುದು, ಅಕ್ಕ ಪಕ್ಕದ ಮನೆಯವರಿಗೆ ಶಬ್ದದಿಂದ ತೊಂದರೆ ಮಾಡುವುದು, ಮತ್ತೊಬ್ಬರ ಮೇಲೆ ಹಲ್ಲೆಗೆ ಯತ್ನಿಸುವುದು, ವಿಚಿತ್ರವಾದ ನಡವಳಿಕೆ.

**ಆರ್ಬಿಟ್ ಸಂಸ್ಥೆಯ ಪಾತ್ರ ಹಾಗೂ ಸಹಾಯ.:–** ಕಳೆದ 11 ತಿಂಗಳ ಹಿಂದೆ ಆರ್ಬಿಟ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಪೂಜಾ ಅವರು ಮನೆ ಭೇಟಿ ಮಾಡಿ, ಅವರ ತಂದೆಯವರೊಂನದಿಗೆ ಅಂಬಿಕಾಳ ಬಗ್ಗೆ ವಿಚಾರಿಸಿದಾಗ ಮೊದಲಿಗೆ ಅವರು ಹೇಗೆ ಖಿನ್ನತೆಗೆ ಒಳಗಾಗಿದ್ದಾಳೆ ಎನ್ನುವುದನ್ನು ಹೇಳಿದರು, ಕಳೆದ 12 ವರ್ಷದ ಹಿಂದಿನಿಂದಲೂ ಭಾನಾಮತಿ ದೆವ್ವ ಹಿಡಿದಿದೆ, ಬಾಬಾಗಳ ಹತ್ತಿರ, ಪೂಜಾರಿಗಳ ಹತ್ತಿರ ತೋರಿಸಿ, ಸುಮಾರು 2 ಎಕ್ಕರೆ ಹೊಲ ಮಾರಿ, ತಮ್ಮ ಆಸ್ತಿಪಾಸ್ತಿಯೆಲ್ಲ ಮಾರಿ ಅನೇಕ ಕಡೆ ತೋರಿಸಿದರು ಕೂಡ ಯಾವ ರೀತಿಯಾಗಿಯೂ ಫಲ ಬರಲಿಲ್ಲ. ಮನೆಯಲ್ಲಿ ಯಾರೂ ಸತ್ತವರ ಹಾಗೆ ಅಳುವುದು, ಬೇರೆಯವರ ಮೇಲೆ ಹಲ್ಲೆ ಮಾಡುವುದು, ತಾನು ಮುಟ್ಟಾಗಿರುವುದನ್ನು ಕೂಡ ಆಕೆಗೆ ಅರಿವು ಇಲ್ಲದ ರೀತಿಯಲ್ಲಿದಳು. ನನ್ನ ಮಗಳಿಗೆ ಆರಾಮ ಆಗುವುದಿಲ್ಲ ನಾನು ಮಾಡಿದ ಎಲ್ಲ ಪ್ರಯತ್ನ ವ್ಯರ್ಥ ಎಂದು ತಮ್ಮ ದುಃಖವನ್ನು ವ್ಯಕ್ತಪಡಿಸಿ ಬಹಳ ಅಳುತ್ತಿದ್ದರು. ಸತತವಾಗಿ ಅವರ ಮನೆಗೆ ಭೇಟಿ ನೀಡಿ ಅವರ ಮನ ಒಲಿಸಿ ಅವರಿಗೆ ಶಿಬಿರಕ್ಕೆ ಕರೆ ತಂದು ಅವರಿಗೆ ಚಿಕಿತ್ಸೆಯನ್ನು ಕೊಡಿಸಿ, ಆಪ್ತ ಸಮಾಲೋಚನೆ ಮಾಡಿಸಿ, ಮಾತ್ರೆಗಳ ಸೇವನೆಯಿಂದ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದಿದೆ.

**ಮೊದಲಿನ ಸ್ಥಿತಿ:–** ಯಾರ ಜೊತೆಯೂ ಮಾತನಾಡುವವರು ಇರಲಿಲ್ಲ, ಜೋರಾಗಿ ಅಳುವುದು ತಿರುಚುವುದು, ಹಲ್ಲಿಗೆ ಯತ್ನ ವಿಚಿತ್ರ ನಡವಳಿಕೆ, ದೈನಂದಿನ ಚಟುವಟಿಕೆ ಮಾಡಿಕೊಳ್ಳುತ್ತಿರಲಿಲ್ಲ, ಮತ್ತೊಬ್ಬರೊಂದಿಗೆ ಮಾತನಾಡುತ್ತಿರಲಿಲ್ಲ, ದಿನವಿಡೀ ಮಲಗಿಕೊಂಡೆ ಇರುತ್ತಿದ್ದರು.
**ಆರ್ಬಿಟ್ ಭೇಟಿಯ ನಂತರದ ಸ್ಥಿತಿ:–** ಸದ್ಯ ಎಲ್ಲರ ಜೊತೆ ಬೆರೆಯುತ್ತಿದ್ದಾರೆ, ಶಾಂತತೆಯ ಸ್ವಭಾವವನ್ನು ಹೊಂದಿಕೊಂಡಿದ್ದಾರೆ, ತನ್ನ ದೈನಂದಿನ ಚಟುವಟಿಕೆ ಸ್ವತಃ ಮಾಡಿಕೊಳ್ಳುತ್ತಾರೆ, ತಲೆ ಬಾಚಿಕೊಳ್ಳುವುದು, ಸ್ನಾನ ಮಾಡುವುದು, ಹಲ್ಲು ಉಜ್ಜುವುದು, ಕೇಳಿದ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುತ್ತಾರೆ. ಮನೆಯ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ. ಗುಡಿಸುವುದು, ನೀರು ತರುವುದು, ಬಟ್ಟೆ ಒಗೆಯುವುದು, ತಾಯಿಯ ಕೆಲಸದಲ್ಲಿ ಸಹಾಯ ಮಾಡುತ್ತಾರೆ. ದಿನವಿಡಿ ಮಲಗುವದಿಲ್ಲ.

## ಯಶಸ್ಸಿನ ಕಥೆ



**ಮಗುವಿನ ಹೆಸರು:– ರಾಧಿಕಾ**
**ತಂದೆ ಹೆಸರು:– ರಮೇಶ್**
**ತಾಯಿ ಹೆಸರು :–ಸುರೇಖಾ**
**ಜನ್ಮ ದಿನಾಂಕ :–25/4/2016**
**ವಯಸ್ಸು :–8**
**ನೊಂದವಣಿ ಸಂಖ್ಯೆ :–ಒ ಆರ್ ಟಿ 222300066**
**ವಿಳಾಸ :–ಹಿಲಾಲ್‌ಪೊರ**
**ತಾ //ಹುಮ್ನಾಬಾದ್, ಜಿ// ಬೀದರ್.**

**ಕುಟುಂಬದ ಹಿನ್ನೆಲೆ:–** ರಾಧಿಕಾ ತಂದಿ ರಮೇಶ್ ಈ ಮಗು ಹಿಲಾಲಪೊರ್ ಗ್ರಾಮದವರಾಗಿದ್ದಾಳೆ .ಇವರ ಕುಟುಂಬದಲ್ಲಿ ಒಟ್ಟು ಮೂರು ಜನ ವಾಸವಾಗಿರುತ್ತಾರೆ. ತಾಯಿ ಸ್ವಸಹಾಯ ಸಂಘಗಳ ಸಭೆಯನ್ನು ನಡೆಸುತ್ತಾರೆ. ತಂದೆ ಬೇರೆ ಕಡೆ ವಾಸವಾಗಿರುತ್ತಾರೆ.

**ಮಗುವಿನ ಮೂಲ ಸಮಸ್ಯೆ :–** ಮಗುವಿಗೆ ನಡಿಲಿಕ್ಕೆ ಬರುತ್ತಿರಲಿಲ್ಲ ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ .ಮಗುವಿಗೆ ಶಾಲೆ ಕೂಡ ಹೋಗಲಿಕ್ಕೆ ಆಗ್ತಾ ಇರಲಿಲ್ಲ. ತಾಯಿ ಶಾಲೆಗೆ ಎತ್ತಿಕೊಂಡು ಬಿಟ್ಟು ಬರುತ್ತಿದ್ದರು ಈ ರೀತಿಯಾಗಿ ಮಗುವಿಗೆ ತುಂಬಾ ಸಮಸ್ಯೆಯಲ್ಲಿ ಬಳಲುತ್ತಿದ್ದಳು.

**ಮಗುವಿಗೆ ನೀಡಿದ ಚಟುವಟಿಕೆಗಳು:–** ಈ ಮಗುವಿಗೆ ಆರ್ಬಿಟ್ ಸಂಸ್ಥೆಯಲ್ಲಿ ನೋಂದಾವಣೆ ಮಾಡಿಕೊಂಡು .ಮಗುವಿನ ಮನೆ ಭೇಟಿ ನೀಡಿ ಮೌಲ್ಯಮಾಪನ ಮಾಡಲಾಯಿತು. ಮೌಲ್ಯಮಾಪನದ ಮೇರೆಗೆ ಮಗುವಿಗೆ ಚಟುವಟಿಕೆಗಳನ್ನು ನಡೆಸುತ್ತಾ ಇದ್ದೇವೆ. ಮಗುವಿಗೆ ಪೌಷ್ಟಿಕ ಆಹಾರ ಮತ್ತು ಸಾಧನ ಸಲಕರಣೆಗಳು ಕೊಡ ವಿತರಣೆ ಮಾಡಲಾಯಿತು. ಮಗುವಿನ ಮನೆಗೆ ಹೋಗಿ ಮನೆ ಆಧರಿತ ಚಟುವಟಿಕೆಗಳು ಅಂದರೆ ಗೋಡೆ ಮುಖಾಂತರ ನಡೆಸುವುದು ಅವಳಿಗೆ ಉಡುಪು ಧರಿಸುವ ಚಟುವಟಿಕೆ, ಪೋಷಕರಿಗೆ ಆಪ್ತಸಮಲೋಚನೆ ಮಾಡಲಾಯಿತು.

**ಮಗುವಿನಲಾದ ಬದಲಾವಣೆಗಳು:–** ಮಗು ಇವಾಗ ಯಾರ ಸಹಾಯವಿಲ್ಲದೆ ನಡೆಯುತ್ತಾ ಇದ್ದಾಳೆ .ಉಡಪುಗಳನ್ನು ತನ್ನ ಸಹಾಯದೊಂದಿಗೆ ಧರಿಸಿಕೊಳ್ಳುತ್ತಿದ್ದಾಳೆ. ನಾವು ನೀಡಿದ ಸಾಧನ ಸಲಕರಣೆಗಳನ್ನು ಬಳಸಿಕೊಂಡು ದಿನ ಚಟುವಟಿಕೆ ನಡೆಸುತ್ತಾ ಇದ್ದಾರೆ. ಮಗು ಬದಲಾವಣೆ ಹೊಂದಿದ ಸ್ಥಿತಿ ಕಂಡು ಪೋಷಕರು ಆರ್ಬಿಟ್ ಸಂಸ್ಥೆಗೆ ಧನ್ಯವಾದ ವ್ಯಕ್ತಪಡಿಸಿದ್ದಾರೆ.

# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯ

## ಆರ್ಬಿಟ್ ಸಂಸ್ಥೆಯಿಂದ ಆರೋಗ್ಯ ಶಿಬಿರ




ಮಲ್ಲಮ್ಮ ನುಡಿ ವಾರ್ತೆ

ಹುಮ್ನಾಬಾದ್: ತಾಲೂಕಿನ ಕುಮಾರ್ ಚಿಂಚೋಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಮತ್ತು ಸಾಲಿನ್ಸ್ ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಕ್ಯಾನ್ಸರ್ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದ ಅಧ್ಯಕ್ಷ ಸ್ಥಾನ ವಹಿಸಿದ ಸಂಸ್ಥೆಯ ಸಿಸ್ಟರ್. ವಿಲ್ಮಾ ಮತ್ತು ಅತಿಥಿ ಗಣ್ಯರಿಂದ ಸಸಿಗೆ ನೀರು ಎರೆವುದರ ಮುಖಾಂತರ ಚಾಲನೆ ಮಾಡಿದರು. ಶಿಬಿರವನ್ನು ಉದ್ದೇಶಿಸಿ ಮಾತನಾಡಿದ ಆರ್ಬಿಟ್ ಸಂಸ್ಥೆಯ ವ್ಯವಸ್ಥಾಪಕರಾದ ಸಿಸ್ಟರ್. ವಿಲ್ಮಾ ಮ್ಯಾಥ್ಯೂ ಅವರು ಆರೋಗ್ಯವೇ ಭಾಗ್ಯ ಎನ್ನುವ ಧೆಯವಾಕ್ಯದೊಂದಿಗೆ ನಾವೆಲ್ಲರೂ ಆರೋಗ್ಯದಿಂದ ಇದ್ದರೆ ಮಾತ್ರ ನಮ್ಮ ಮನೆ, ನಮ್ಮ ಊರು, ಆರೋಗ್ಯದಿಂದಿರಲು ಸಾಧ್ಯ ಎಂದು ತಿಳಿಸುತ್ತಾ ಸಂಸ್ಥೆಯು ಮಾಡುವ ಹಲವಾರು ಸಮಾಜಿಕ ಕಾರ್ಯಗಳನ್ನು ಜನರಿಗೆ ತಿಳಿಸಿದರು. ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಪ್ರಾದೇಶಿಕ ಮುಖ್ಯಸ್ಥರಾದ ಗುರುರಾಜ್ ಕುಲಕರ್ಣಿ ಅವರು ಮಾತನಾಡುತ್ತಾ ಕ್ಯಾನ್ಸರ್ ನ ಲಕ್ಷಣಗಳು ಕಾರಣಗಳು ಮತ್ತು ವಿವಿಧ ಪ್ರಕಾರದ ಕ್ಯಾನ್ಸರ್ ರೋಗಗಳ ಇರುತ್ತವೆ ಎಂದು ಜನರಲ್ಲಿ ಅರಿವು ಮೂಡಿಸಿ ತಾವೆಲ್ಲರೂ ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಜನರಲ್ಲಿ ವಿಶ್ವಾಸ ನಿಯ ವ್ಯಕ್ತಪಡಿಸಿದರು.

ಈ ಶಿಬಿರದಲ್ಲಿ ಒಟ್ಟು 92 ಗ್ರಾಮಸ್ಥರು, ಸುಲ್ತಾನಬದ ವಾಡಿ ಗ್ರಾಮ ಪಂಚಾಯತಿಯ ಸದಸ್ಯರು, ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಮುಕ್ಬುಲ್ ಸರ್, ಶಿಕ್ಷಕ ವೃಂದದವರು ಹಾಗೂ ಜಲಸಂಗಿ ಕೇಂದ್ರದ ಬ್ರದರ್. ಫ್ರಾನ್ಸಿಸ್ ಹಾಗೂ ಗ್ರಾಮದ ಆಶಾ ಕಾರ್ಯಕರ್ತೆಯರು, VRW ಆದ ನವನಾಥ್ ಅಊಆ ಯ PHCO ಆದ ಅಂಬಾಬಾಯಿ ಮತ್ತು ಆರ್ಬಿಟ್ ಸಂಸ್ಥೆಯ ಸಂಯೋಜಕರಾದ ಪ್ರವೀಣ್ ಕಾರ್ಯಕರ್ತರಾದ ಅರುಣ್ ಕುಮಾರ್ ಸೂರ್ಯಕಾಂತ್ ಪ್ರೀತಿ ಹಾಗೂ ಪೂಜಾ ಭಾಗವಹಿಸಿದರು.

## ಬಡವರು ಸಮಾಜದ ಮುಖ್ಯ ವಾಹಿನಿಗೆ ಬರಬೇಕು: ಬಿಷಪ್ ರಾಬರ್ಟ್ ಮೈಕಲ್ ಮಿರಂದ್





ಜೋಗುರ ಗ್ರಾಮದಲ್ಲಿ ಜರುಗಿದ ಆರೋಗ್ಯ ತಪಾಸಣಾ ಉಚಿತ ಶಿಬಿರದಲ್ಲಿ ರೋಗಿಗಳ ತಪಾಸಣೆ ಮಾಡಲಾಯಿತು.

## ಆರೋಗ್ಯ ತಪಾಸಣಾ ಉಚಿತ ಶಿಬಿರ

ಸಂ.ಕ. ಸಮಾಚಾರ ಜೋಗುರ/ಕಲಬುರಗಿ: ಕಲಬುರಗಿ ತಾಲೂಕಿನ ಜೋಗುರ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಆಶ್ರಯದಲ್ಲಿ ಜೋಗುರ ಗ್ರಾಮದ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಆರೋಗ್ಯ ತಪಾಸಣಾ ಉಚಿತ ಶಿಬಿರ ಹಮ್ಮಿಕೊಳ್ಳಲಾಯಿತು.

ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕ ಫಾದರ್ ದೀಪಕ್, ಬಸವಪಟ್ಟಣ ಪಂಚಾಯತ ಹರಳಯ್ಯರಾಯ ದೇಸಾಯಿ, ಮತ್ತು ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂಯೋಜಕ ಶ್ರೀನಿಧಿ ಡಾ. ಅಕ್ಷತಾ ಯಾದವ, ಮಂಗಲಾ, ಸಹಾಯಕಿ ಜೋಗುರ, ಉಮೇಶ, ಗ್ರಾಪಂ ಸದಸ್ಯರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕ ಫಾದರ್ ದೀಪಕ್ ಮಾತನಾಡಿ, ಕಾಲಕಾಲಕ್ಕೆ ಸರಿಯಾದ ತಪಾಸಣೆಯು ಕ್ಯಾನ್ಸರ್‌ನಿಂದ ಆಗುವ ದುಷ್ಪರಿಣಾಮಗಳನ್ನು ತಗ್ಗಿಸಬಹುದು ಎಂದು ತಿಳಿಸಿದರು.

ಬಸವಪಟ್ಟಣ ಗ್ರಾಮ ಪಂಚಾಯತಿಯ ಹರಳಯ್ಯರಾಯ ದೇಸಾಯಿ ಮಾತನಾಡಿ, ಈ ಶಿಬಿರದಲ್ಲಿ ವಿಶೇಷವಾಗಿ ಗರ್ಭಕೋಶ, ಬಾಯಿ, ಸ್ತನ ಕ್ಯಾನ್ಸರ್, ಪರೀಕ್ಷೆ ಮಾಡಲಾಯಿತು ಎಂದು ತಿಳಿಸಿದರು.

ಈ ಶಿಬಿರದಲ್ಲಿ ಒಟ್ಟು 80 ಜನ ಶಿಬಿರದ ಸದುಪಯೋಗ ಪಡೆದುಕೊಂಡರು. ಶ್ವೇತಾ ಸ್ವಾಗತಿಸಿ, ಸ್ವಾತಿ ವಂದಿಸಿ, ರಾಜಕುಮಾರ ನಿರೂಪಿಸಿದರು.

ಬಸವ ಪಟ್ಟಣದ ಗ್ರಾಮ ಪಂಚಾಯತಿಯ ಆಡಳಿತ ವರ್ಗ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ವೈದ್ಯಕೀಯ ತಂಡ ಹಾಗೂ ಫರಹತಾಬಾದ ಸಹಾಯಕಿ ಜೋಗುರ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಸೇವಾ ಸಂಗಮ ಸಂಸ್ಥೆ ಸಿಬ್ಬಂದಿ, ಗ್ರಾಮದ ಜನರು ಭಾಗವಹಿಸಿದರು.

ರವಿವಾರ 03-03-2024

## ಕ್ಯಾನ್ಸರ್ ನಿರ್ಮೂಲನೆಗೆ ಸಕಾಲದಲ್ಲಿ ಚಿಕಿತ್ಸೆ ಪಡೆದುಕೊಳ್ಳಿ: ಫಾದರ್ ದೀಪಕ್



ಬಸವ ಜಯಂತ್ಯುತ್ಸವ: ಚಿತ್ತಾಪುರದಲ್ಲಿ

ಟಾಪ್ ನ್ಯೂಸ್

## ಬೆಳವಣಿಗೆ ಕುಂಠಿತ ಮಕ್ಕಳಿಗೆ ಸಲಕರಣೆ ವಿತರಣೆ

ಆರ್ಬಿಟ್ ಸಂಸ್ಥೆಯಲ್ಲಿ ಪಾಲಕರ ಸಭೆ



# ORBIT

**NGO**
Non-Governmental Organization
Humnabad, Karnataka

Organization of Bidar Integral Transformation

## Our Programmes



## Scan this QR Code
## TO DONATE

www.orbitbidar.in

Orbit Bidar
@Orbitbidar330
orbit humnabad

For any kind of query, contact us with the details below.

+91 8660968063
orbitbidar93@gmail.com

NH 65, Near Railway Station,
Humnabad Taluk, Bidar District,
Karnataka, India Pincode- 585330

# SEVA SANGAMA
Development Society, Kalaburagi

**NGO**
Non-Governmental Organization
Kalaburagi, Karnataka

## Scan this QR Code
## TO DONATE

www.sevasangama.in



Action Speak Louder Than Words!

# GIVE TODAY

Donate on our webpage or call our donation numbers. Our donation will go toward the are of the greatest need,which may incide direct feeding programs or other life-changing programmes.

Seva Sangama Developement Society Near Kendriya Vidyalaya, Kotnoor D, Kalaburagi, Karnataka - 585102- Contact Number : 8660968063, 9743112739
Email : sevasangama2006@gmail.com
Website : www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ *1993* ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ *2005*ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು,

ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/– ವರ್ಷಕ್ಕೆ 40,000/–



ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/–

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು *PAN number* ಕೆಳಗಿರುವ ಸಂಖ್ಯೆಗೆ *WhatsApp* ಮಾಡುವುದು.

**(Only for Indian Citizens)**

**Bank Account Details**

DONATE NOW

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in